# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** Vol XXIV - 3 ಮಾರ್ಚ್ 2006


**FORTHCOMING PROGRAMMES**

12.03-2006 ರವಿವಾರ "ಮುಕ್ತ ಸಂವಾದ"

ಸ್ಥಳ : ಮೈಸೂರು ಅಸೋಸಿಯೇಶನ್ ಸಭಾಗೃಹ

ಗುರುವಾರ 23.03-2006ರಿಂದ 26.03-2006ರ ವರೆಗೆ

## ಚಂದ್ರಶೇಖರ ಕಂಬಾರರ ನಾಟಕೋತ್ಸವ

23.03-2006 ಸಂಜೆ 6.00 ಗಂಟೆಗೆ

"ಸಾಂಬ ಶಿವ ಪ್ರಹಸನ"

ನಟನ ತಂಡ, ಮೈಸೂರು

24.03-2006 ಸಂಜೆ 6.00ಗಂಟೆಗೆ

"ಸಿರಿ ಸಂಪಿಗೆ"

ನಟರಂಗ, ಬೆಂಗಳೂರು ಇವರಿಂದ

25.03-2006 ಸಂಜೆ 6.00ಗಂಟೆಗೆ

"ಹರಕೆಯ ಕುರಿ"

ರಂಗಸಂಪದ, ಬೆಂಗಳೂರು ಇವರಿಂದ

26.03-2006

| | |
|---|---|
| ವಿಚಾರ ಸಂಕಿರಣ | ಬೆಳಿಗ್ಗೆ 10.00ರಿಂದ 12.00 |
| ಡಾ. ಚಂದ್ರಶೇಖರ ಕಂಬಾರರೊಡನೆ ಸಂವಾದ | 12.00ರಿಂದ 1.00 |
| ಭೋಜನ ವಿರಾಮ | 1.00ರಿಂದ 2.30 |
| ರಂಗಗೀತೆಗಳು | 2.30 ರಿಂದ 4.00 |
| ವಿರಾಮ | 4.00ರಿಂದ 6.00 |
| "ಸಂಗ್ಯಾ ಬಾಳ್ಯ" | 6.00 ಗಂಟೆಗೆ |

❀ ❀ ❀

Rs. 5/-

6.04-2006 ರಾಮ ನವಮಿ ಪೂಜೆ ಹಾಗೂ ಭಜನೆ


**The Mysore Association, Bombay**

393, Bhaudaji Road, Matunga, Mumbai - 400 019.

Phone : 2402 4647, 2403 7065 • Fax : 2401 0574

E-mail : karunadu@bom5.vsnl.net.in

# ಡಿ.ವಿ.ಜಿ. ಮತ್ತು ಸಾರ್ವಜನಿಕ ಜೀವನ

- ಎಸ್.ಆರ್. ರಾಮಸ್ವಾಮಿ

ಪ್ರಧಾನ ಸಂಪಾದಕರು, "ಉತ್ಥಾನ" ಮಾಸಪತ್ರಿಕೆ, ಬೆಂಗಳೂರು -560019

ಡಿ.ವಿ.ಜಿ.ಯವರೇ ಒಂದು ಸಂದರ್ಭದಲ್ಲಿ ಹೇಳಿದ ಮಾತು ಇದು:

"I have looked upon life as one undivided whole. All aspects of it are equal to me. Without good morals, there is no good citizenship. Without culture, you can expect no good morals. **The most urgent need is education for citizenship.** I do not mean anything abstract. I mean by it the ordinary simple virtues which our people are accustomed to, honesty, fellow-feeling and desire to be good and do good. **The difficulty is in our people not being courageous to speak the truth and courageous in expressing their preference to a thing or abhorerrence to a thing.**

ಇದೇ ಅಭಿಪ್ರಾಯವನ್ನು ಬೇರೆ ಹಲವಾರು ಕಡೆಗಳಲ್ಲಿಯೂ ಡಿ.ವಿ.ಜಿ. ವ್ಯಕ್ತ ಮಾಡಿದ್ದಾರೆ. ವಿ.ಕೃ. ಗೋಕಾಕರು ಒಮ್ಮೆ ಹೀಗೆಂದರು "ಐವತ್ತರವತ್ತು ವರ್ಷಗಳ ಹಿಂದೆ ದೇಶವು ಮೂಕವಾಗಿದ್ದಾಗ ಡಿ.ವಿ.ಜಿ. ಮೊದಲು ಮಾತನಾಡಿದರು, ಧ್ವನಿ ಎತ್ತಿದರು. ಅನಂತರ ಉಳಿದವರಿಗೂ ಮಾತನಾಡಬೇಕೆನ್ನಿಸಿತು. ಡಿ.ವಿ.ಜಿ. ಮೊದಲು ಪ್ರೇರಣೆಗೆ ಒಳಗಾದರು. ಅನಂತರ ತಾವೇ ಪ್ರೇರಕದಲ್ಲಿ ಒಬ್ಬರಾದರು.

ಕನ್ನಡ ಸಾಹಿತ್ಯ ಪರಿಷತ್ತು 1970ರ ಜನವರಿ ತಿಂಗಳಲ್ಲಿ ಡಿ.ವಿ.ಜಿ.ಯವರನ್ನು ಕುರಿತು ಅವರ ಸಾರ್ವಜನಿಕ ಸನ್ಮಾನಕ್ಕೆ ಪೂರ್ವಭಾವಿಯಾಗಿ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ವಿ. ಸೀತಾರಾಮಯ್ಯನವರು, ತಿ. ತಾ. ಶರ್ಮರವರು, ಎಂ. ಮರಿಯಪ್ಪ ಭಟ್ಟರು ಮೊದಲಾದ ಗಣ್ಯರಿಂದ ಡಿ.ವಿ.ಜಿ.ಯವರ ವ್ಯಕ್ತಿತ್ವವನ್ನೂ ಕೃತಿಗಳನ್ನೂ ಕುರಿತು ಉಪನ್ಯಾಸಗಳಾದವು. ಮಾಸ್ತಿ ಅಂದಿನ ಅಧ್ಯಕ್ಷರು.

ವಿ.ಸೀ. ತಮ್ಮ ಭಾಷಣವನ್ನು ಹೀಗೆ ಉಪಕ್ರಮಿಸಿದರು. 'ಈ ಮಹನೀಯರ ಹೆಸರೇ ಗುಂಡಪ್ಪನವರು. ಗುಂಡಿನ ಅಥವಾ ಗೋಲದ ಒಂದು ಲಕ್ಷಣ - ಅದರ ಯಾವ ಬಿಂದುವಾದರೂ ಕೇಂದ್ರವಾಗಬಹುದು, ಯಾವುದಾದರೂ ಪರಿಧಿಯಾಗಬಹುದು! ಗೋಲಕ್ಕೆ ಪ್ರಾರಂಭ ಯಾವುದು, ಕೊನೆ ಯಾವುದು? ಗುಂಡಪ್ಪನವರನ್ನು ಕುರಿತು ಮಾತನಾಡ ಹೊರಟಾಗನಮ್ಮ ಕಷ್ಟ ಇದೇ. ಎಲ್ಲಿ ಪ್ರಾರಂಭ ಮಾಡಬೇಕು, ಎಲ್ಲಿ ಮುಗಿಸಬೇಕು?

ರಾಷ್ಟ್ರಕತೆ-ಸಾಹಿತ್ಯ ಕಾರ್ಯಗಳು

> *ಎಸ್. ಆರ್. ರಾಮಸ್ವಾಮಿಯವರು ಜನವರಿಯಲ್ಲಿ ನಡೆದ ಡಿ.ವಿ.ಜಿ. ಸಂಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಕ್ತಾರರಲ್ಲಿ ಒಬ್ಬರು. ಅವರ ಭಾಷಣದ ಕೆಲ ಆಯ್ದ ಭಾಗಗಳ ಮೊದಲ ಕಂತನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. - ಸಂ.*

ಡಿ.ವಿ.ಜಿಯವರಲ್ಲಿ ಸಮನ್ವಿತವಾಗಿದ್ದವು. 'ಯಾವ ವಸ್ತುಸೌಂದರ್ಯ ಗುಣಸೌಂದರ್ಯಗಳಿಂದ ಕವಿಯ ನಿರ್ಮಿತಿ ನಮಗೆ ಆನಂದದಾಯಕವಾಗಿರುತ್ತದೆಯೋ... ಆ ದಿವ್ಯ ಸೌಂದರ್ಯಗಳನ್ನು, ಆ ತೇಜಸ್ಸುಗಳನ್ನು ಜನತೆಯ ನಿತ್ಯ ಜೀವನದಲ್ಲಿ ಯತ್ಕಿಂಚಿತ್ತಾದರೂ ಘನರೂಪಕ್ಕೆ ತರುವುದು ರಾಜ್ಯ ಕರ್ಮಿಯ ಪ್ರಯತ್ನ'

ಡಿ.ವಿ.ಜಿ.ಯವರು ತಮ್ಮ ಜೀವನಕ್ಕೆ ತೋರುಬೆಳಕಾಗಿ ಇರಿಸಿಕೊಂಡು ಮೇಲಿಂದ ಮೇಲೆ ಸ್ಮರಿಸುತ್ತಿದ್ದ ಮಾತು:

ಜ್ಞಾನಿನಾ ಚರಿತುಂ ಶಕ್ಯಂ  
ಸಮ್ಯಗ್ ರಾಜ್ಯಾದಿಲೌಕಿಕಮ್॥  
(ಜ್ಞಾನಿಯಿನಕ್ಕುಂ ಹಿತಸಂ-  
ಧಾನಂ ರಾಜ್ಯಾದಿ ಲೌಕಿಕ ವ್ಯವಹೃತಿಯೊಳ್॥)

ಈ ವಿದ್ಯಾರಣ್ಯ ವಚನವೂ, ಸಾರ್ವಜನಿಕ ಜೀವನವನ್ನು ಧರ್ಮಮಯವಾಗಿಸಬೇಕು (Public life must be spiritualized) ಎಂಬ ಗೋಪಾಲಕೃಷ್ಣ ಗೋಖಲೆಯವರ ಆದರ್ಶವೂ ಡಿ.ವಿ.ಜಿ.ಯವರ ಜೀವಿತ- ಸಾಧನೆಯನ್ನು ಅರಿಯಲು ಕೈಮರಗಳೆನ್ನಬಹುದು.

ದೇಶಭಕ್ತಿ, ನಿಷ್ಪಕ್ಷಪಾತ ದೃಷ್ಟಿ, ವೈಚಾರಿಕ ಶ್ರದ್ಧೆ ಮೊದಲಾದ ಅಂಶಗಳಲ್ಲಿ ಡಿ.ವಿ.ಜಿ.ಯವರಿಗೆ ಸ್ಫೂರ್ತಿಸ್ಥಾನವಾಗಿದ್ದವರು ಗೋಪಾಲಕೃಷ್ಣ ಗೋಖಲೆ.

## ಪ್ರಖರ ರಾಷ್ಟ್ರೀಯತೆ

ಏಳು ದಶಕಗಳಷ್ಟು ಕಾಲ ನಿರಂತರ ಪತ್ರಿಕೋದ್ಯಮ ನಡೆಸಿದವರು ಡಿ.ವಿ.ಜಿ. (ಜನನ:17.3.1887: ನಿಧನ: 7.10.1975); ಮತ್ತು ಆರಂಭದಿಂದ ತಮ್ಮ ಮಾತು-ಬರಹದಲ್ಲಿ ರಾಷ್ಟ್ರೀಕತೆಯನ್ನು ಪ್ರಖರವಾಗಿ ಎತ್ತಿಹಿಡಿದವರು. 1913-1918ರ ವರ್ಷಗಳಲ್ಲಿ 'ಕರ್ನಾಟಕ' ಇಂಗ್ಲಿಷಿನ ವಾರಾರ್ಧಪತ್ರಿಕೆ ನಡೆಸುವಾಗಲೂ ಡಿ.ವಿ.ಜಿ. ಘೋಷಿಸಿದ್ದ ಸೂತ್ರ 'ನಮ್ಮ ದೇಶದ ಪತ್ರಿಕೆಗಳು ಅಮೆರಿಕದ ಪತ್ರಿಕೆಗಳನ್ನಾಗಲಿ ಬೇರೆ ಯಾವುದೋ ವಿದೇಶದ ಪತ್ರಿಕೆಗಳನ್ನೇ ಆಗಲಿ ಅನುಕರಣೆ ಮಾಡಬೇಕಾದದ್ದಿಲ್ಲ. ನಮ್ಮ ಸಮಾಜ ಸಂದರ್ಭಗಳಿಗೆ ತಕ್ಕಂತೆ ಮತ್ತು ನಮ್ಮ ಜನದ ಮನಃಸ್ವಭಾವದ ಸಂಪ್ರದಾಯಗಳಿಗೆ ಒಗ್ಗಿಕೊಳ್ಳುವಂತೆ ನಮ್ಮ ಪತ್ರಿಕೆಗಳು ನಡೆಯಬೇಕು.

ಸ್ವಭಾವದಲ್ಲಿಯೇ ಸೇವಾಭಿಮುಖಿವಾಗಿದ್ದ ಡಿ.ವಿ.ಜಿ.ಯವರ ಸಾರ್ವಜನಿಕ ಜೀವನಕ್ಕೆ ಹೆಚ್ಚಿನ ಚಾಲನೆ ನೀಡಿದವರು ವಿಶ್ವೇಶ್ವರಯ್ಯನವರು - 1912ರಲ್ಲಿ ಡಿ.ವಿ.ಜಿ.ಯವರನ್ನು ಬೆಂಗಳೂರು ನಗರ ಸಭೆಯ ಸದಸ್ಯರಾಗಿ ನೇಮಕ ಮಾಡುವುದರ ಮೂಲಕ. ಆದರೆ ಅದಕ್ಕೂ ಹಿಂದೆಯೇ ಡಿ.ವಿ.ಜಿ. ತಮ್ಮ ಜೀವನ ಈ ದಿಕ್ಕಿನಲ್ಲಿ ಇರತಕ್ಕದ್ದೆಂದು ನಿರ್ಧರಿಸಿಕೊಂಡದ್ದಾಗಿತ್ತು. ಯಾವುದಾದರೂ ಒಂದು ಸಣ್ಣ ನೌಕರಿ ದೊರಕಿಸಿಕೊಂಡು, ಅದರಿಂದ ಜೀವನ ನಡೆಸುತ್ತಾ, ತಮ್ಮ ಹೆಚ್ಚಿನ ಸಮಯವನ್ನು ಸಮಾಜಸೇವೆಗೆ ಮೀಸಲಿರಿಸುವುದಾಗಿ ಮುಳಬಾಗಿಲಲ್ಲಿದ್ದ ತಮ್ಮ ತಂದೆಗೆ ಪತ್ರಗಳನ್ನು ಬರೆದಿದ್ದರು. ಇದು ಸ್ವಲ್ಪ ಹಾಸ್ಯಕ್ಕೂ ವಿಷಯವಾಗಿತ್ತು. "ನಿಮ್ಮ ಹುಡುಗ ಬೆಂಗಳೂರಿನಲ್ಲಿ ಸೇರಿಕೊಂಡು ಏನು ಮಾಡಬೇಕೊಂತಿದ್ದಾನೆ?"- ಎಂದು ಹಳ್ಳಿಯವರು ಕೇಳಿದಾಗ ಡಿ.ವಿ.ಜಿ.ಯವರ ತಂದೆ ವೆಂಕಟರಮಣಯ್ಯನವರು ತಮಗೆ ಅರ್ಥವಾಗಿದ್ದಷ್ಟನ್ನು ಹಳ್ಳಿಯವರಿಗೆ ಹೇಳಿದರಂತೆ. ಕೆಲವರಿಗೆ ಸ್ವಲ್ಪ ಅರ್ಥವಾಯಿತು. ಕೆಲವರಿಗೆ ಅಷ್ಟು ಮಾತ್ರವೂ ಅರ್ಥವಾಗಲಿಲ್ಲ. ಅವರು ಇತರ ಹಳ್ಳಿಗರನ್ನು ಕೇಳಿದರು (ತೆಲುಗಿನಲ್ಲಿ)

ಅಟ್ಲಂಟೇ ಏಮಿರಾ (ಹಾಗೆಂದರೆ ಏನು?)

ಅದಕ್ಕೆ ಉಳಿದ ಹಳ್ಳಿಯವರು ವ್ಯಾಖ್ಯಾನ ಹೇಳಿದರು

"ಆಕಾಶಾನಿಕಿ ಕಂಬಳಿ ಕಪ್ಪುತಾಡಂಟ"

(ಆಕಾಶಕ್ಕೆ ಹೊದಿಕೆ ಹೊದಿಸುತ್ತಾನಂತೆ)

ಹೀಗೆ ಆಕಾಶಕ್ಕೆ ಬೆಡ್‌ಶೀಟ್ ಹೊದೆಸುವ ಕೆಲಸವನ್ನು ಡಿ.ವಿ.ಜಿ. ಜೀವಮಾನವೆಲ್ಲ ಮಾಡಿದರು.

ಅಲ್ಪ ಕಾಲದಲ್ಲಿ ಡಿ.ವಿ.ಜಿ.ಯವರಿಗೆ ಜನಪ್ರಮುಖರಾಗಿ ಎಷ್ಟು ಖ್ಯಾತಿಯು ಪ್ರಾಪ್ತವಾಯಿತೆಂದರೆ ಪ್ರಮುಖ ಸಾರ್ವಜನಿಕ ಚಟುವಟಿಕೆಗಳಲ್ಲೆಲ್ಲ ಅವರ ಪಾತ್ರವಿರುವುದು ಸ್ವಾಭಾವಿಕ ಎನಿಸಿಬಿಟ್ಟಿತು. ಸುಮಾರು ಎಂಟು ವರ್ಷ ಕಾಲ(1912-20) ಅವರು ಬೆಂಗಳೂರು ಪುರಸಭೆಯ ಸದಸ್ಯರಾಗಿದ್ದರು. ಹದಿನೈದು ವರ್ಷಗಳಷ್ಟು ದೀರ್ಘಕಾಲ(1926-1940) ಲೆಜಿಸ್ಲೆಟಿವ್ ಕೌನ್ಸಿಲ್/ವಿಧಾನ ಪರಿಷತ್ತಿನ ಸದಸ್ಯರಾಗಿದ್ದುದು ಮಾತ್ರವಲ್ಲದೆ ಅದರ ಪ್ರಮುಖ ಸಮಿತಿಗಳ ಸದಸ್ಯರಾಗಿಯೂ ಯೋಗದಾನ ಮಾಡಿದರು. ಇದರ ಜೊತೆ ಜೊತೆಗೇ(1927-1943) ಆಗಿನ್ನೂ ಬಾಲ್ಯಾವಸ್ಥೆಯಲ್ಲಿದ್ದ (ಸ್ಥಾಪನೆ: 1916)

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರೂ, ಆರು ವರ್ಷ ಕಾಲ (1933-1939) ಯೂನಿವರ್ಸಿಟಿಯ ಎಕ್ಸಿಕ್ಯೂಟಿವ್ ಕೌನ್ಸಿಲ್ ಸದಸ್ಯರೂ ಆಗಿ ಸೇವೆ ಸಲ್ಲಿಸಿದರು. ಡಿ.ವಿ.ಜಿ.ಯವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದುದೂ ಅದೇ ಅವಧಿಯಲ್ಲಿ. ಆದರೆ ಪರಿಷತ್ತಿನ ಆರಂಭ ಕಾಲದಿಂದಲೇ(ಸ್ಥಾಪನೆ: 1915) ಆ ಪ್ರಯತ್ನದಲ್ಲಿ ಸಕ್ರಿಯರಾಗಿದ್ದವರು ಡಿ.ವಿ.ಜಿ.

ಹೀಗೆ 1912 ರಿಂದ 1943ರ ವರೆಗಿನ ಮೂವತ್ತು ವರ್ಷಗಳ ಅವಧಿಯನ್ನು ಡಿ.ವಿ.ಜಿ.ಯವರ ಸಾರ್ವಜನಿಕ ಜೀವನದ ಒಂದು ಪ್ರಮುಖ ಮಜಲು ಎಂದು ಭಾವಿಸಬಹುದು. ಅವರ ಸಾರ್ವಜನಿಕ ಜೀವನವನ್ನು ಇವತ್ತು ಇಲ್ಲಿ ಇರುವ ಪರಿಮಿತ ಅವಕಾಶದಲ್ಲಿ (೧) ದೇಶೀಯ ಸಂಸ್ಥಾನಗಳ ಸಂಬಂಧದಲ್ಲಿ ಡಿ.ವಿ.ಜಿ.ಯವರ ಪ್ರಯಾಸ, (೨)ಶಾಸಕರಾಗಿ ಡಿ.ವಿ.ಜಿಯವರ ಕಾರ್ಯ, (೩)ಸಂಸ್ಥೆಗಳ ನಿರ್ಮಾಪಕ ಪ್ರವರ್ತಕರಾಗಿ ಡಿ.ವಿ.ಜಿ.ಯವರ ಪ್ರಯತ್ನಗಳು - as a builder of institutions- ಈ ಮೂರು ವಿಭಾಗಗಳಲ್ಲಿ ಪರಿವೀಕ್ಷಿಸೋಣ:

### ದೇಶೀಯ ಸಂಸ್ಥಾನಗಳು

ರಾಜಕೀಯ ವ್ಯಾಖ್ಯಾಕಾರರಾಗಿ, ವಿಶ್ಲೇಷಕರಾಗಿ ಡಿ.ವಿ.ಜಿಯವರ ಹೆಸರು ಕರ್ನಾಟಕದಲ್ಲಿ ಮಾತ್ರವಲ್ಲದೆ ರಾಜ್ಯದಾಚೆಗೂ ಹರಡಿತ್ತು. ದೇಶೀಯ ಸಂಸ್ಥಾನಗಳ ವಿಶಿಷ್ಟ ಸಮಸ್ಯೆಗಳನ್ನು ಕುರಿತು ಅಧಿಕಾರಯುತವಾಗಿ ಮಾತನಾಡಬಲ್ಲ ಭಾರತೀಯರಲ್ಲಿ ಅಗ್ರಪಂಕ್ತಿಯವರೆಂದು ಡಿ.ವಿ.ಜಿ.1915ರ ವೇಳೆಗೇ ವಿಶಾಲ ಮನ್ನಣೆ ಗಳಿಸಿಕೊಂಡಿದ್ದರು. ಈ ವಿಷಯದ ವಿವಿಧ ಮುಖಗಳನ್ನು ಕುರಿತ ಅವರ ಹಲವಾರು ಬರಹಗಳು ಪ್ರೊ ಬೆರ್ರಿಡೇಲ್ ಕೀತ್ ಮೊದಲಾದ ಜಗದ್ವಿಖ್ಯಾತ ರಾಜ್ಯಶಾಸ್ತ್ರಜ್ಞರ ಹಾಗೂ ಸರ್ ಪಿ.ಎಸ್. ಶಿವಸ್ವಾಮಿ ಅಯ್ಯರ್ ಮೊದಲಾದ ಭಾರತೀಯ ಸಂವಿಧಾನ ತಜ್ಞರ ಗಮನವನ್ನೂ ಸೆಳೆದಿದ್ದವು. ಡಿ.ವಿ.ಜಿ.ಯವರ ವಿದ್ವತ್ತನ್ನು ಅತಿಶಯವಾಗಿ ಮೆಚ್ಚಿದ್ದ ಇನ್ನೊಬ್ಬರು, ದೀನಬಂಧು ಸಿ.ಎಫ್.ಆ್ಯಂಡ್ರೂಸ್. ಡಿ.ವಿ.ಜಿ.ಯವರ ರಾಜಕೀಯ ವ್ಯಾಖ್ಯೆಗಳು ಇಂಗ್ಲೆಂಡಿನ ಪ್ರಸಿದ್ಧ ಪತ್ರಿಕೆಗಳಲ್ಲೂ ಉಲ್ಲೇಖಗೊಳ್ಳುತ್ತಿದ್ದವು.

ಕರ್ನಾಟಕ ಪತ್ರಿಕೆಯ ಮೂಲಕ ಡಿ.ವಿ.ಜಿ. ಮಾಡಿದ ಒಂದು ಗಣನೀಯ ಸಾಧನೆಯೆಂದರೆ, ಆಗ ಬಹುಮಟ್ಟಿಗೆ ಬ್ರಿಟಿಷ್ ಭಾರತಕ್ಕೆ ಸೀಮಿತವಾಗಿದ್ದ ಸ್ವಾತಂತ್ರ್ಯಾಂದೋಲನದ ಸಂದರ್ಭದಲ್ಲಿ ದೇಶೀಯ ಸಂಸ್ಥಾನಗಳ ವಿಶಿಷ್ಟ ಸಮಸ್ಯೆಗಳ ಸ್ವರೂಪದ ಬಗೆಗೆ ರಾಷ್ಟ್ರದ ಪ್ರಮುಖ ಚಿಂತಕರ ಹಾಗೂ ಆಂಗ್ಲಪ್ರಭುತ್ವದ ಗಮನ ಸೆಳೆದದ್ದು. ಈ ಕ್ಷೇತ್ರದಲ್ಲಿ ಡಿ.ವಿ.ಜಿ.ಯವರ ಅಭ್ಯಾಸ ಎಷ್ಟು ಆಳವಾಗಿತ್ತೆಂದರೆ, ಆಗ ಈ ವಿಷಯದ ಬಗೆಗೆ ಅಧಿಕಾರಯುತವಾಗಿ ಮಾತನಾಡಬಲ್ಲರೆಂದು ಹೆಸರಾದ ರಾಷ್ಟ್ರಮಟ್ಟದ ಬೆರಳೆಣಿಕೆಯಷ್ಟು ವಿದ್ವಾಂಸರಲ್ಲಿ ಡಿ.ವಿ.ಜಿ.ಯವರು ಗಣ್ಯತೆ ಪಡೆದಿದ್ದರು.

ಕಾಂಗ್ರೆಸ್, ಲಿಬರಲ್ ಫೆಡರೇಶನ್, ಹೋಂ ರೂಲ್ ಲೀಗ್ ಮುಂತಾದ ರಾಜಕೀಯ ಸಂಸ್ಥೆಗಳು ಈ ವಿಷಯದಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ನಡೆಸಿದಂತೆಯೇ ಚಳವಳಿಯನ್ನು ನಡೆಸಬೇಕೆಂದು ಡಿ.ವಿ.ಜಿ. ಅಪೇಕ್ಷಿಸಿದ್ದರು. ಇದಕ್ಕಾಗಿ 1918ರಲ್ಲಿ ಬೊಂಬಾಯಿಯಲ್ಲಿ ನಡೆದ ಕಾಂಗ್ರೆಸ್ಸಿನ ವಿಶೇಷ ಅಧಿವೇಶನಕ್ಕೆ ಡಿ.ವಿ.ಜಿ. ಹೋಗಿದ್ದರು. ಕಾಂಗ್ರೆಸ್ ಸಂಸ್ಥೆಯು ದೇಶೀಯ ಸಂಸ್ಥಾನಗಳ ರಾಜಕೀಯ ಸಮಸ್ಯೆಗಳನ್ನು ಅಧ್ಯಯನ ಮಾಡಲು ಬೇರೆಯಾದ ಒಂದು ವಿಭಾಗವನ್ನು ಸ್ಥಾಪಿಸಬೇಕು; ದೇಶೀಯ ಸಂಸ್ಥಾನಗಳ ಸಮಸ್ಯೆಗಳನ್ನು ತಿಳಿಯಲು ಬೇಕಾದ ಮಾಹಿತಿಯನ್ನು ಸಂಗ್ರಹಿಸಲು, ಆ ಸಂಸ್ಥಾನದ ಪ್ರಜೆಗಳಿಗೆ ಜವಾಬ್ದಾರಿ ಸರಕಾರ, ಸಮಗ್ರ ಭಾರತ ದೃಷ್ಟಿ ಮುಂತಾದ ವಿಷಯಗಳಲ್ಲಿ ತಿಳಿವಳಿಕೆ ಕೊಡಲು ಮತ್ತು ಅವರನ್ನು ಉತ್ತಮ ರಾಷ್ಟ್ರಕರನ್ನಾಗಿ ಬೆಳೆಸಲು ಎಲ್ಲ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು - ಎಂದೆಲ್ಲ ಸೂಚಿಸಿದರು.

ಆದರೆ -Cricketನ ಪರಿಭಾಷೆಯಲ್ಲಿ ಹೇಳುವುದಾದರೆ - the ball did not take the spin. ತನಗಿದ್ದ ಶಾಸನಬಲವನ್ನು ಆಂಗ್ಲ ಸರ್ಕಾರ ಮನಸ್ಸಿಗೆ ಬಂದಂತೆ ಬಳಸಿಕೊಳ್ಳುತ್ತಿತ್ತು. ಭಾರತಕ್ಕೆ ಸ್ವಾತಂತ್ರ್ಯ ನೀಡುವುದನ್ನು ನಿರಾಕರಿಸಲು ಆಂಗ್ಲಸರ್ಕಾರ ನೀಡುತ್ತಿದ್ದ ಕಾರಣ - ಭಾರತದ ದೇಶೀಯ ಸಂಸ್ಥಾನಗಳಿಗೂ ಆಂಗ್ಲ ಸರ್ಕಾರಕ್ಕೂ ನಡುವೆ ಹಿಂದಿನಿಂದ ಜಾರಿಯಲ್ಲಿದ್ದ ಒಡಂಬಡಿಕೆ ಕರಾರುಗಳಿದ್ದವೆಂಬುದು. ಈ ವಾದಗಳ ತಥ್ಯತೆಯ ಮಾತು ಒತ್ತಟ್ಟಿಗಿರಲಿ. ದೇಶೀಯ ಸಂಸ್ಥಾನಗಳ, ಅವುಗಳ ಪ್ರಜೆಗಳ ಭವಿಷ್ಯವನ್ನು ಕುರಿತು ನಿಷ್ಕರ್ಷೆಯಾಗುವುದು ಭಾರತೀಯರ ದೃಷ್ಟಿಯಿಂದಲೇ ಅವಶ್ಯಕವಾಗಿತ್ತು.

ಹೀಗೆ ಅನೇಕ ಜನ ಮಹಾರಾಜರೊಂದಿಗೆ ಡಿ.ವಿ.ಜಿ. ವಾಗ್ಯುದ್ಧ ನಡೆಸುವ ಪ್ರಸಂಗಗಳೊದಗಿದವು.

ಇದಕ್ಕೆ ವಿರುದ್ಧವಾದ ಅನುಭವಗಳೂ ಆದದ್ದುಂಟು. ಪ್ರಜಾಪ್ರಭುತ್ವ ಬರಲಿರುವುದರ ಅನಿವಾರ್ಯತೆಯನ್ನು ಮನಗಂಡ ಹಲವರು ಮಹಾರಾಜರು, ಅವರ ರಾಜ್ಯಾಡಳಿತದ ಸುಧಾರಣೆಯ ಬಗೆಗೆ ಡಿ.ವಿ.ಜಿ.ಯವರ ಸಲಹೆ ಕೋರಿದರು. ಉದಾಹರಣೆಗೆ ಫಲ್ಟನ್ - ಸಂಸ್ಥಾನದ ಮಹಾರಾಜರು ವಿಶ್ವೇಶ್ವರಯ್ಯನವರ ಸಲಹೆ ಕೋರಿದಾಗ, ವಿಶ್ವೇಶ್ವರಯ್ಯನವರು ಆ ಕೆಲಸವನ್ನು ಡಿ.ವಿ.ಜಿ.ಯವರಿಗೆ ವಹಿಸಿದರು. ಡಿ.ವಿ.ಜಿ.ಯವರಿತ್ತ ಸೂಚನಾವಳಿಯನ್ನು ಮಹಾರಾಜರು ಮೆಚ್ಚಿ ಅದರ ಹೆಚ್ಚಿನ ಅಂಶಗಳನ್ನು ಅಳವಡಿಸಿಕೊಂಡಿದ್ದಲ್ಲದೆ ಆ ಮೇಲಿನ ದಿನಗಳಲ್ಲೂ ಡಿ.ವಿ.ಜಿ.ಯವರೊಡನೆ ಆತ್ಮೀಯ ಪತ್ರವ್ಯವಹಾರ ಮುಂದುರಿಸಿದರು.

ಹೀಗೆ ದೂರದೃಷ್ಟಿಯ ಚಿಂತನೆ ಮಾಡಿ, ಈ ಜಟಿಲ ಸಮಸ್ಯೆಯ ವಿವಿಧ ಮುಖಗಳಿಗೆ ಸಾರ್ವಜನಿಕರ ಹಾಗೂ ಆಂಗ್ಲಸರ್ಕಾರದ ಗಮನ ಸೆಳೆಯಲು ಮತ್ತು ಸಂಸ್ಥಾನಿಕ ಪ್ರಜೆಗಳನ್ನು ಸಂಘಟಿಸಲು ಶ್ರಮಿಸುತ್ತಿದ್ದವರಲ್ಲಿ ಡಿ.ವಿ.ಜಿ., ಸಾಂಗ್ಲಿಯ ಜಿ.ಆರ್. ಅಭ್ಯಂಕರ್, ಜಮಖಂಡಿಯ ಎ.ವಿ. ಪಟವರ್ಧನ್, ಡಾ. ಹುಲ್ಯಾಳಕರ್ ಮತ್ತು ಮಾಧವರಾವ್ ಲೀಲೆ, ಪುಣೆಯ ಎನ್.ಸಿ. ಕೇಳ್ಕರ್ ಮತ್ತು ಡಿ.ವಿ. ಗೋಖಲೆ, ಔಂಧ್‌ನ ಪಂಡಿತ್ ಸಾತವಳೇಕರ್ ಪ್ರಮುಖರು.

'ಚೇಂಬರ್ ಆಫ್ ಪ್ರಿನ್ಸಸ್' (ನರೇಂದ್ರ ಮಂಡಲ) ಎಂಬ ಸಂಸ್ಥಾನಾಧಿಪರ ಪರಿಷತ್ತನ್ನು ಐದನೆ ಜಾರ್ಜ್ ದೊರೆ ರಚಿಸಿದ್ದ. ಆ ಮಂಡಲದಲ್ಲಿ ಪ್ರಮುಖರಾಗಿದ್ದ ಬಿಕಾನೇರಿನ ಮಹಾರಾಜರಿಗೆ ಡಿ.ವಿ.ಜಿ. 1917ರಲ್ಲಿ ಬರೆದ ಬಹಿರಂಗಪತ್ರಸರಣಿ ಡಿ.ವಿ.ಜಿ.ಯವರ ಖ್ಯಾತಿ ದೂರ ರಾಜ್ಯಗಳಿಗೂ ಹರಡಲು ಕಾರಣವಾಯಿತು. 1918ರಲ್ಲಿ ಇ.ಎಸ್. ಮಾಂಟೆಗುರವರಿಗೆ ಡಿ.ವಿ.ಜಿ. ಬರೆದ ಮನವಿಯೂ ರಾಷ್ಟ್ರದ ಎಲ್ಲ ಧೀಮಂತರ ಗಮನ ಸೆಳೆಯಿತು.

ದೇಶೀಯ ಸಂಸ್ಥಾನಗಳ ವಿಷಯವನ್ನು ಆಳವಾಗಿ ಅಧ್ಯಯನ ಮಾಡುವುದಕ್ಕಾಗಿ ಡಿ.ವಿ.ಜಿ. 1925ರ ಹೊತ್ತಿಗೆ ಮುಂಬಯಿ, ದೆಹಲಿ ಮುಂತಾದ ಕಡೆಗಳಿಗೆ ಹೋಗಿ, ಅನೇಕ ಜನ ಪ್ರಮುಖರನ್ನು ಭೇಟಿ ಮಾಡಿ, ವಿಷಯ ಸಂಗ್ರಹ ಮಾಡಿಕೊಂಡರು.

ಜನವರಿ 1929ರಲ್ಲಿ ತಿರುವಾಂಕೂರಿನಲ್ಲಿ ದಕ್ಷಿಣ ಭಾರತದ ದೇಶೀಯ ಸಂಸ್ಥಾನಗಳ ಪ್ರಜೆಗಳ ಸಮ್ಮೇಳನವೊಂದು ನಡೆಯಿತು. ಆ ಸಮ್ಮೇಳನಕ್ಕೆ ಅಧ್ಯಕ್ಷತೆ ವಹಿಸಲು ಅಮಂತ್ರಿತರಾಗಿದ್ದ ವಿಶ್ವೇಶ್ವರಯ್ಯನವರು, ಡಿ.ವಿ.ಜಿ.ಯವರು ಸಹಾಯ ಮಾಡಬೇಕು ಎಂಬ ಷರತ್ತಿನ ಮೇಲೆ ಅಧ್ಯಕ್ಷ ಪದವಿಯನ್ನು ಒಪ್ಪಿಕೊಂಡರು. ಇದರಂತೆ ತಿರುವಾಂಕೂರಿನಲ್ಲಿ ಸಮ್ಮೇಳನ ನಡೆಯಿತು.

ಸಮ್ಮೇಳನದಲ್ಲಿ ಅಂಗೀಕರಿಸಲ್ಪಟ್ಟ ನಿರ್ಣಯವು 'ಟ್ರಿವಾಂಡ್ರಮ್ ಮೆಮೊರಾಂಡಮ್' ಎಂದೇ ಪ್ರಸಿದ್ಧವಾಯಿತು. ಅದರ ಮುಖ್ಯಾಂಶಗಳು ಮೂರು:

1. ಭಾರತ ಏಕೈಕವಾದ ಸಂಯುಕ್ತ ರಾಷ್ಟ್ರವಾಗಿರತಕ್ಕದ್ದು.

2. ದೇಶಿಯ ರಾಜ್ಯಗಳಲ್ಲಿ ಯಾವ ಯಾವುವು ಭೂವಿಸ್ತಾರದಿಂದಲೂ ಉಪಪತ್ತಿಯಿಂದಲೂ ಇತರ ದೃಷ್ಟಿಗಳಿಂದಲೂ ಇರುವಂತೆಯೇ ಉಳಿದಿರಲು ಅರ್ಹವಾದವೆಂದು ತೋರುತ್ತದೆಯೋ ಅವು ರೂಪಗೆಡದೆ ತಮ್ಮ ತಮ್ಮ ರಾಜರುಗಳೊಡನೆ ಉಳಿದುಕೊಂಡು ಸಂಯುಕ್ತ ಭಾರತದ ಅಂತರ್ಭಾಗಗಳಾಗಿ ಜೀವಿಸಿರತಕ್ಕದ್ದು.

3. ಸಂಯುಕ್ತ ರಾಷ್ಟ್ರದ ಎಲ್ಲ ಭಾಗಗಳಲ್ಲಿಯೂ ಪ್ರಜಾಭಿಪ್ರಾಯಕ್ಕೊಳಪಟ್ಟ ಸರ್ಕಾರಗಳಿರತಕ್ಕದ್ದು.

ಈಗ ತಾವಾಗಿ ರಾಜರುಗಳು ಜನರಿಗೆ ಜವಾಬ್ದಾರಿಯನ್ನು ಸಂತೋಷದಿಂದ ಒಪ್ಪಿಸದೆ ಹೋದರೆ, ನಾಳೆ ಅರಸರ ಕೈಯಿಂದ ಜನ ಅದನ್ನು ಬಲಾತ್ಕಾರವಾಗಿ ಕಿತ್ತುಕೊಳ್ಳುತ್ತಾರೆ. ಆಧುನಿಕ ಜೀವನ ಸಮಸ್ಯೆಗಳನ್ನು ಎದುರಿಸಲು ಬೇಕಾದ ಶಕ್ತಿಯು ನಿರಂಕುಶಾಧಿಕಾರ ವ್ಯವಸ್ಥೆಯಲ್ಲಿ ಇರಲಾರದು ಮತ್ತು ಪ್ರಜೆಗಳಲ್ಲಿರುವ ಪ್ರತಿಭೆ-ಕೌಶಲಗಳನ್ನು ಸಾರ್ವಜನಿಕ ಹಿತಕ್ಕಾಗಿ ನಿಯೋಜಿಸುವುದರಲ್ಲಿ ಸಂಸ್ಥಾನಾಧಿಪರ ಹಿಂದಿನ ಜಾಡಿನ ರೀತಿನೀತಿಗಳು ಸಫಲವಾಗಲಾರವು. ಆದುದ್ದರಿಂದ ಅರಸರ ಹಕ್ಕುಗಳನ್ನೂ ಸಂರಕ್ಷಿಸುವ ನೂತನ ಭಾರತ ಸಂಯುಕ್ತ ರಾಷ್ಟ್ರ ವ್ಯವಸ್ಥೆಗೆ ಎಲ್ಲ ಬೆಂಬಲವನ್ನು ಅರಸರು ಕೊಡಬೇಕು - ಎಂಬುದು ಡಿ.ವಿ.ಜಿ.ಯವರ ನಿಲುವಾಗಿತ್ತು.

ಆದರೆ ಡಿ.ವಿ.ಜಿ. ಈ ಹೋರಾಟದಲ್ಲಿ ತಾವೊಬ್ಬರೇ ನಿಲ್ಲಬೇಕಾಯಿತು. ಕಾಂಗ್ರೆಸ್ ಸಂಸ್ಥೆ, ಮೈಸೂರು ಸ್ಟೇಟ್ ಕಾಂಗ್ರೆಸ್ ಸ್ಥಾಪನೆಯಾಗುವುದಕ್ಕೆ ಮೊದಲು, ಈ ವಿಷಯದಲ್ಲಿ ಪ್ರವೇಶಿಸಲು ಇಷ್ಟಪಡುತ್ತಿರಲಿಲ್ಲ. ಇದೇ ಗುರಿಯಿದ್ದ ಇತರ ಸಂಸ್ಥೆಗಳ ಧೋರಣೆಯೂ ಬೇರೆಯಾಗಿದ್ದುದರಿಂದ ಡಿ.ವಿ.ಜಿ. ಏಕಾಂಗಿಯಾಗಿ ತಮ್ಮ ಸಮಯ, ಪ್ರತಿಭೆ, ಹಣ ಎಲ್ಲವನ್ನು ಈ ಕೆಲಸಕ್ಕಾಗಿ ವಿನಿಯೋಗಿಸಿದರು.

1931ರಲ್ಲಿ ಡಿ.ವಿ.ಜಿ. ''The States and their people in the Indian Constitution'' 'ಭಾರತದ ಸಂವಿಧಾನದಲ್ಲಿ ದೇಶೀಯ ಸಂಸ್ಥಾನಗಳು ಮತ್ತು ಅಲ್ಲಿಯ ಪ್ರಜೆಗಳ ಸ್ಥಾನ' ಎಂಬ ಉದ್ಗ್ರಂಥವೊಂದನ್ನು ಬರೆದರು. ಅದು ಈ ವಿಷಯವನ್ನು ಕುರಿತ ಒಂದು ಸಮಗ್ರವಾದ ಆಕರಗ್ರಂಥವಾಯಿತು.

ದೇಶದ ಹಿತ ದೃಷ್ಟಿಯಿಂದ ಯಾವುದಾದರೂ ಕಾರ್ಯ ಆಗತ್ಯವೆನಿಸಿದರೆ, ಅದನ್ನು ಬೇರೆಯವರ ಪ್ರೋತ್ಸಾಹ -ಪ್ರೇರಣೆಗಳಿಗಾಗಿ ಕಾಯದೆ ತಾವೇ ಹೆಗಲ ಮೇಲೆ ಹೊರುವ ಡಿ.ವಿ.ಜಿ.ಯವರ ಸ್ವಭಾವಕ್ಕೆ ಒಂದು ನಿದರ್ಶನ ಇದು. ದೇಶೀಯ ಸಂಸ್ಥಾನಗಳ ವಿಷಯ ಯಾರಿಗೂ ಬೇಡದ ಕಾರ್ಯವಾಗಿತ್ತು. ದೇಶ ಎಷ್ಟು ಚೂರು ಚೂರಾಗಿದ್ದರೆ ತಮಗೆ ಅಷ್ಟು ಅನುಕೂಲ - ಎಂದುಕೊಂಡಿದ್ದರು ಬ್ರಿಟಿಷರು. ಕಾಂಗ್ರೆಸ್ ಈ ಸಂಸ್ಥಾನಗಳ ವಿಷಯದಲ್ಲಿ ಬಹುಮಟ್ಟಿಗೆ ಅನಾಸಕ್ತವಾಗಿತ್ತು. ಇನ್ನು ಜನಸಾಮಾನ್ಯರಿಗೆ ಸಮಸ್ಯೆಯ ಜಟಿಲತೆಯ ಮತ್ತು ಪರಿಹಾರದ ಅನಿವಾರ್ಯತೆಯ ಅರಿವು ಇರಲಿಲ್ಲ. ಇಂಥ ನಿರುತ್ಸಾಹಕರ ಪರಿಸರದಲ್ಲಿ ಡಿ.ವಿ.ಜಿ. ಮೂವತ್ತು ವರ್ಷಕಾಲ ಈ ಸಮಸ್ಯೆಯ ಬೆನ್ನು ಹತ್ತಿ ತಮ್ಮ ಶಕ್ತಿಯನ್ನೆಲ್ಲ ತೊಡಗಿಸಿದರು; ಹಲವು ದಶಕಗಳುದ್ದಕ್ಕೂ ಇದ್ದ ಸ್ಥಗಿತ ಸ್ಥಿತಿಯನ್ನು ಮುರಿಯಲು ಡಿ.ವಿ.ಜಿ. ಏಕಾಂಗವೀರರಾಗಿ ಶ್ರಮಿಸಿದರು.

1927ರಲ್ಲಿ ಎಲ್ಲೋರಿನ ದಿವಾನ್ ಬಹಾದ್ದೂರ್ ಎಂ. ರಾಮಚಂದ್ರರಾಯರ ನೇತೃತ್ವದಲ್ಲಿ 'ಇಂಡಿಯನ್ ಸ್ಟೇಟ್ಸ್ ಪೀಪಲ್ಸ್ ಕಾನ್‌ಫರೆನ್ಸ್' ಎಂಬ ಅಖಿಲ ಭಾರತ ಸಂಘಟನೆಯೊಂದು ಏರ್ಪಟ್ಟಿತು. ಅದರಲ್ಲಿ ದಕ್ಷಿಣ ಭಾರತ ರಾಜ್ಯಗಳ ಪ್ರತಿನಿಧಿಯಾಗಿ ಡಿ.ವಿ.ಜಿ.ಯವರನ್ನು ನಿಯೋಜಿಸಲಾಗಿತ್ತು. ಭಾವನಗರದ ಬಲವಂತರಾಯ್ ಮೆಹ್ತಾ, ಸಾಂಗ್ಲಿಯ ಜಿ.ಆರ್. ಅಭಯಂಕರ್ ಮೊದಲಾದ ಪ್ರತಿಷ್ಠಿತ ಜನನಾಯಕರನ್ನೊಳಗೊಂಡಿದ್ದುದು ಆ ಗೋಷ್ಠಿ.

ಲಂಡನ್ನಿನ ಚಕ್ರಗೋಷ್ಠಿಯಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ದೇಶೀಯ ಸಂಸ್ಥಾನಗಳ ಬಗ್ಗೆ ಮಾತನಾಡುವಾಗ ಡಿ.ವಿ.ಜಿ.ಯವರ ಬರಹಗಳನ್ನು ಉದ್ಧರಿಸಿದ್ದರು.

### ಕ್ಯಾಬಿನೆಟ್ ಆಯೋಗ

1935-45ರ ಅವಧಿಯಲ್ಲಿ ಭಾರತದ ನಾಯಕರು, ಆಂಗ್ಲಸರ್ಕಾರದ ಅಧ್ವರ್ಯುಗಳು ಇಬ್ಬರೂ ಸೆಟೆದುಕೊಂಡಿದ್ದರ ಪರಿಣಾಮವಾಗಿ ಸಂವಿಧಾನಿಕ ವಿಚಾರವಿನಿಮಯ ಬಹುಮಟ್ಟಿಗೆ ಸ್ಥಗಿತಗೊಂಡಿತ್ತು. ಅದಕ್ಕೆ ಮತ್ತೆ ಜೀವ ಬಂದದ್ದು 1946ರ ಮಾರ್ಚ್ - ಜೂನ್ ಅವಧಿಯಲ್ಲಿ ಮೂವರು ಬ್ರಿಟಿಷ್ ಸಂಪುಟ ಸದಸ್ಯರ (ಪೆಥಿಕ್ ಲಾರೆನ್ಸ್, ಸ್ಟ್ಯಾಫರ್ಡ್ ಕ್ರಿಪ್ಸ್, ಎ.ವಿ. ಅಲೆಗ್ಸಾಂಡರ್) ಆಯೋಗ (ಕ್ಯಾಬಿನೆಟ್ ಆಯೋಗ) ಭಾರತಕ್ಕೆ ಭೇಟಿ ನೀಡಿದಾಗ. ಚರ್ಚಿಲರ ಅಪ್ಪಟ ಸಾಮ್ರಾಜ್ಯಪರ ಧೋರಣೆಯನ್ನೊಪ್ಪದೆ, ಭಾರತದ ಸ್ವಾತಂತ್ರ್ಯಾರ್ಹತೆಯನ್ನು ಅಂಗೀಕರಿಸಿದ್ದು ಪೆಥಿಕ್ ಲಾರೆನ್ಸರ ರಚನಾತ್ಮಕ ಸೂಚನೆಗಳ ವೈಶಿಷ್ಟ್ಯ. ಇನ್ನೊಂದು ವೈಶಿಷ್ಟ್ಯವೆಂದರೆ ವಿಭಜನೆಯನ್ನು ಒಪ್ಪದೆ ಭಾರತದ ಅಖಂಡತೆಯನ್ನು ಉಳಿಸಿದ್ದುದು. ಆದರೆ ಭಾರತದಿಂದ ಕಾಲ್ತೆಗೆಯುವುದಾದರೆ ಅದನ್ನು ಒಡೆದೇ ಎಂಬ ಚರ್ಚಿಲರ ಸೂತ್ರವನ್ನು ವೈಸರಾಯ್‌ರುಗಳಾದ ಲಿನ್‌ಲಿತ್‌ಗೋ, ವೇವೆಲ್ ಮತ್ತು ಮೌಂಟ್ ಬ್ಯಾಟನರು ಹಟದಿಂದ ಮತ್ತು ಜಾಣಾಕ್ಷತೆಯಿಂದ ಕಾರ್ಯಗತಗೊಳಿಸಿದರು.

### ಪಾಕಿಸ್ತಾನ ರಚನೆಗೆ ವಿರೋಧ

ಪಾಕಿಸ್ತಾನದ ರಚನೆಯನ್ನು ಕೊನೆಯವರೆಗೂ ವಿರೋಧಿಸಿದರು, ಡಿ.ವಿ.ಜಿ. 1945ರಲ್ಲಿ ಸರ್ ತೇಜಬಹಾದ್ದೂರ ಸಪ್ರು ಅವರು ಕಳಿಸಿದ ಪ್ರಶ್ನಾವಳಿಗೆ ಉತ್ತರಿಸುತ್ತ ಡಿ.ವಿ.ಜಿ. ತಮ್ಮ ವಾದವನ್ನು ಪುನರುಚ್ಚರಿಸಿದರು : ''I am totally opposed to the idea of erecting a State on the basis of a religion". ಆ ಮೇಲಿನ ನಾಲ್ಕಾರು ಬರಹಗಳಲ್ಲಿಯೂ ಡಿ.ವಿ.ಜಿ. ಇದನ್ನು ದೃಢೀಕರಿಸಿದರು. 1946ರ ಫೆಬ್ರುವರಿಯಲ್ಲಿ ಬರೆದ ''All - India Federal Union'' ಗ್ರಂಥದಲ್ಲಿ ಹೀಗೆಂದರು :

''ಪಾಕಿಸ್ತಾನ ಬೇಡಿಕೆಯನ್ನು ನಾವು ಪೂರ್ಣವಾಗಿ ವಿರೋಧಿಸಬೇಕಾಗಿದೆ. ೧) ಅದು ಜನಗಳ ಮತನಿಷ್ಠೆಯನ್ನವಲಂಬಿಸಿ ರಾಜ್ಯ ನಿರ್ಮಿಸಹೊರಟಿದೆ. ಇದು ಅಪಾಯಕಾರಿ. ೨) ಅದು ಅಲ್ಪಸಂಖ್ಯಾತರ ಸಮಸ್ಯೆಯನ್ನು ಬಗೆಹರಿಸಲಾರದು. ಏಕೆಂದರೆ ಹಿಂದೂಗಳು ಸಿಕ್ಕರು ಕ್ರಿಶ್ಚಿಯನ್ನರೂ ಪಾಕಿಸ್ತಾನದಲ್ಲಿ ಬಾಳಬೇಕಾಗುತ್ತದೆ. ೩) ಸಂಪನ್ಮೂಲಗಳು ಹ್ರಾಸಗೊಳ್ಳುವುದರಿಂದ ಪಾಕಿಸ್ತಾನಕ್ಕೇ ತೊಂದರೆಯಾಗುತ್ತದೆ. ೪) ಹಿಮಾಲಯದಿಂದ ಶ್ರೀರಾಮ ಸೇತುವಿನವರೆಗೆ ಹಿಂದುಗಳ ನಾಡೆಂದು ಪ್ರಪ್ರಾಚೀನ ಕಾಲದಿಂದ ಗಣನೆಯಿದೆ. ೫) ಭಾರತವು ವಿಭಜಿತವಾದರೆ ವಿದೇಶೀ ಶಕ್ತಿಗಳಿಗೆ ಆಡುಂಬೊಲವಾಗುತ್ತದೆ. ೬) ಈ ವಿಷಯದಲ್ಲಿ ಒಮ್ಮೆ ಸ್ವನಿರ್ಣಯಾಧಿಕಾರ ತತ್ತ್ವವನ್ನು ಅಂಗೀಕರಿಸಿದಲ್ಲಿ, ಅದು ದೇಶ ವಿಚ್ಛಿದ್ರಗೊಳ್ಳಲು ಅಸ್ತಿಭಾರ ಹಾಕಿದಂತೆಯೇ. ಯಾವ ತಲೆತಿರುಗಿದ ಬಣವಾದರೂ ಮುಂದೆಂದಾದರೂ ಸ್ವಾತಂತ್ರ್ಯ ಕೋರೀತು.''

ದೇಶವಿಭಜನೆಯಿಂದ ತಮ್ಮ ಮನಸ್ಸಿಗಾದ ನೋವನ್ನು ಸ್ವಲ್ಪವಾದರೂ ಮರೆಯಲು ಡಿ.ವಿ.ಜಿ. ಪಂಜಾಬ್ ನಿರಾಶ್ರಿತರ ನೆರವಿಗಾಗಿ 1947ರ ಅಂತ್ಯದಲ್ಲಿ ಬೆಂಗಳೂರಿನ ಹಲವೆಡೆ ನಡೆದ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡರು.

## ನಿವೇದನೆ

ಹಲವು ಅಸೋಸಿಯೇಶನ್ ಸದಸ್ಯರು ಗಣಪತಿಯ ನಿತ್ಯಪೂಜೆಗೆ ರೂ. 1000/-ವನ್ನು ದೇಣಿಗೆಯಾಗಿ ಕೊಟ್ಟಿರುತ್ತಾರೆ. ಈಗ ಬದಲಾದ ಕಾಲದಲ್ಲಿ ಪೂಜಾ ವಿಧಿಯ ಖರ್ಚು ಹೆಚ್ಚಿರುವುದರಿಂದ ಈ ದೇಣಿಗೆಯನ್ನು ರೂ. 1000/-ದಿಂದ ರೂ. 1500/-ಕ್ಕೆ ಹೆಚ್ಚಿಸಲಾಗಿದ್ದು, ಹೆಚ್ಚಿಸಲಾದ ರೂ. 500/-ನ್ನು ದಯವಿಟ್ಟು ಪಾವತಿಸಬೇಕಾಗಿ ವಿನಂತಿ.

- ಕಾರ್ಯದರ್ಶಿ

# ಪಾಶ್ಚಾತ್ಯ ಸಂಗೀತದ ಮೂಲ ಭಾರತೀಯ ಸಂಗೀತವೆ ?

ನಾನು ಬಹಳ ಕಾಲದಿಂದಲೂ ಬರುವ ಪ್ರಮುಖ ಷಡ್ಜ (ಸ) ಸ್ವರವನ್ನು ಪಾಶ್ಚಾತ್ಯ ಸಂಗೀತದಲ್ಲಿ "middle-C" ಎಂದು ಏತಕ್ಕೆ ಕರೆಯುತ್ತಾರೆಂದು ಯೋಚಿಸುತ್ತಲೇ ಇದ್ದೆ.

ಈಗ ನಡೆದು ಬಂದಿರುವಂತೆ ನಮ್ಮ ಸಂಗೀತದ ಒಂದು ಸ್ಥಾಯಿಯಲ್ಲಿ ಬರುವ ಸ ರಿ ಗ ಮ ಪ ಧ ನಿ ಎಂಬ ಸಪ್ತ ಸ್ವರಗಳಂತೆ ಪಾಶ್ಚಾತ್ಯ ಸಂಗೀತದಲ್ಲಿಯೂ ABCDEFG ಎಂಬ ಸಪ್ತ ಸ್ವರಗಳ (7 notes) ಸ್ಥಾಯಿಯಿದೆ. ಆದರೆ ಅದು ನಮ್ಮ ಸ್ಥಾಯಿಯ ಧನಿ ಸ ರಿ ಗ ಮ ಪ ಎಂಬ ಸಪ್ತ ಸ್ವರಗಳಿಗೆ ಹೊಂದುತ್ತದೆ; ಮತ್ತು ಅವರ ಮೂರನೆಯ ಸ್ವರ (note) ವಾದ C ನಮ್ಮ ಷಡ್ಜಕ್ಕೆ ಹೊಂದಿಕೊಂಡು ನಮಗೆ ಷಡ್ಜವು ಹೇಗೆ ಪ್ರಮುಖವಾಗಿದೆಯೋ ಅವರಿಗೂ C ಸ್ವರವು ಪ್ರಮುಖವಾಗಿದೆ. ನಮ್ಮ ಸಪ್ತ ಸ್ವರಗಳಲ್ಲಿ ಮ ಸ್ವರವು ಮಧ್ಯ ಸ್ವರವಾಗಿರುವುದರಿಂದ ಅದನ್ನು ಮಧ್ಯಮ ಸ್ವರವೆಂದೇ ಹೆಸರಿಲಾಗಿದೆ. ಆದರೆ ಪಾಶ್ಚಾತ್ಯ ಸಂಗೀತ ಸಪ್ತ ಸ್ವರಗಳಲ್ಲಿ 'C' ಸ್ವರವು ಮೂರನೇಯ ಸ್ವರವಾಗಿದ್ದರೂ middle-C ಎಂದೇ ಕರೆಯಲ್ಪಡುತ್ತಿದೆ ಏಕೇ?

ನಾವು ಸಂಗೀತ ರಚನೆಗಳಲ್ಲಿ ಏಳು ಸ್ವರಗಳು ಅಥವಾ ಕಡಿಮೆ ಸ್ವರಗಳನ್ನು ಉಪಯೋಗಿಸಿದರೂ ನಮ್ಮಲ್ಲಿ ಪ್ರಕೃತಿ ಸ್ವರಗಳೆಂದೆನಿಸಿಕೊಂಡಿರುವ ಷಡ್ಜ (ಸ) ಮತ್ತು ಪಂಚಮ (ಪ) ಸ್ವರಗಳನ್ನು ಬಿಟ್ಟು ಮಿಕ್ಕ ರಿ ಗ ಮ ಧ ನಿ ಎಂಬ ಐದು ಸ್ವರಗಳಿಗೂ ಎರಡೆರಡು ಸ್ವರಗಳಿರುತ್ತವೆ. ಅಂದರೆ ಮಧ್ಯ ಸ್ಥಾಯಿಯೆಂಬ ಈ ಸ್ಥಾಯಿಯಲ್ಲಿ ಸ, ರಿ೧, ರಿ೨, ಗ೨, ಗ೩, ಮ೧, ಮ೨, ಪ, ಧ೧, ಧ೨, ನಿ೨, ನಿ೩ ಎಂಬ ಹನ್ನೆರಡು ಸ್ವರಗಳಿರುತ್ತವೆ. ಈ ಸ್ವರಗಳು ಒಂದರಿಂದ ಒಂದಕ್ಕೆ ಸಮಾನಾಂತರ ಧ್ವನಿ ಏರಿಸುತ್ತ ಹೋಗಿ ಹದಿಮೂರನೆಯ ಸ್ವರವು ಮೊದನೆಯ ಸ್ವರದೊಂದಿಗೆ ತಾರ ಸ್ಥಾಯಿಯ ಷಡ್ಜ (ಸ) ಎನಿಸಿಕೊಂಡು ಅದೇ ರೀತಿ ಮುಂದುವರಿಸಿಕೊಂಡು ಹೋಗುತ್ತದೆ. ಹಾಗೆಯೇ ಮೂಲ ಷಡ್ಜದಿಂದ ಧ್ವನಿ ಇಳಿಸುತ್ತಾ ಹೋದರೆ ನಿ ಧ ಪ ಮ ಇತ್ಯಾದಿ ಸ್ವರಗಳು ಮಂದ್ರ ಸ್ಥಾಯಿಯೆಂದು ಕರೆಯಲ್ಪಡುತ್ತದೆ. ಎಲ್ಲ ಸಂಗೀತ ಪದ್ಧತಿಗಳಿಗೂ ಷಡ್ಜ ಸ್ವರವು ಪ್ರಮುಖ ಪಾತ್ರವಹಿಸುತ್ತದೆ ಎಂಬುದು ಸಿದ್ಧವಾಗಿದೆ. ಅದಕ್ಕೆ ಎರಡು ಮಾತಿಲ್ಲ. ನಮ್ಮ ಲಕ್ಷಣ ಗೀತೆಗಳಲ್ಲಿ ಬರುವಂತೆ ಸಾಗ್ರಹಾ ನ್ಯಾಸ ಅಂಶ ಎಂಬ ಭಾದಂತೆ ಒಂದು ರಚನೆಯ ಪ್ರಾರಂಭದಲ್ಲಿಯಾಗಲೀ (ಗ್ರಹ) ಮುಕ್ತಾಯದಲ್ಲಿಯಾಗಲೀ (ನ್ಯಾಸ) ಅಥವಾ ಅವೆರಡರ ಮಧ್ಯೆ ಜೀವ ಸ್ವರವಾಗಲೀ (ಅಂಶ) ಷಡ್ಜ (ಸ) ಸ್ವರದ ಪಾತ್ರ ಮೂರು ಸಂಗೀತ ಪದ್ಧತಿಗಳಲ್ಲೂ ಪ್ರಮುಖ.

ನಮ್ಮ ಮೂಲ ಪ್ರಶ್ನೆಗೆ ಹೋಗುವ ಮೊದಲು ಸಂಗೀತ ಜಗತ್ತಿನ ಮೂರು ಪದ್ಧತಿಗಳಲ್ಲೂ ಬರುವ ಮೇಲೆ ಹೇಳಿರುವ ಒಂದು ಸ್ಥಾಯಿಯ ಹನ್ನೆರಡು ಸಮಾನಂತರ ಧ್ವನಿ ಏರಿಕೆ ಇಳಿಕೆಗಳಿಗೊಳಗೊಂಡ ಸ್ವರಗಳ ರೂಪ ರೇಷೆಗಳನ್ನು ನೋಡೋಣ.

ನಮ್ಮ ಕರ್ನಾಟಕ ಸಂಗೀತದಲ್ಲಿ ಹದಿನೇಳನೆಯ ಶತಮಾನದ ಮಹಾವಾಗ್ಗೇಯಕಾರ, ಸಂಗೀತ ತಜ್ಞ ಬರೆದ ಚತುರ್ದಂಡಿ ಪ್ರಕಾಶಿಕೆ ಎಂಬ ಸಂಸ್ಕೃತದ ಪುಸ್ತಕದಲ್ಲಿ ಒಂದು ಸ್ಥಾಯಿಯ ಹನ್ನೆರಡು ಸ್ವರಗಳನ್ನು ಹದಿನಾರು ಸ್ವರಗಳನ್ನಾಗಿ ಕಲ್ಪಿಸಿಕೊಂಡು ಎಪ್ಪತ್ತೆರಡು ಮೇಳಕರ್ತರಾಗಗಳನ್ನು ಸೃಷ್ಟಿಸಿದನು. ಇದು ಕೇವಲ ಎರಡೆರಡೇ ಇದ್ದರೂ ಎಲ್ಲ ಸ್ವರಗಳಿಗೂ ಮೇಳಕರ್ತ ರಾಗಗಳನ್ನು ಸೃಷ್ಟಿಸಿದನು. ಇದು ಕೇವಲ ಎರಡೆರಡೇ ಇದ್ದರೂ ಎಲ್ಲ ಸ್ವರಗಳಿಗೂ ಮೂರು ಮೂರು ಸ್ವರ ಸ್ಥಾನಗಳನ್ನು ಕಲ್ಪಿಸಿದ್ದಾನೆ. ಅದು ಹೇಗೆ.

ಕರ್ನಾಟಕ ಸಂಗೀತ

| | | | |
|---|---|---|---|
| I | ಷಡ್ಜ (ಸ) | .... | ೧ |
| II | ಶುದ್ಧ ರಿಷಭ (ರಿ೧) | .... | ೨ |
| III | ಚತುಶ್ರುತಿ ರಿಷಭ (ರಿ೨) | .... | ೩ |
| | ಮತ್ತು | | |
| | ಶುಧ ಗಾಂಧಾರ (ಗ೧) | .... | ೪ |
| IV | ಸಾಧಾರಣ ಗಾಂಧಾರ (ಗ೨) | .... | ೫ |
| | ಮತ್ತು | | |
| | ಷಟ್ಶ್ರುತಿ ರಿಷಭ (ರಿ೩) | .... | ೬ |
| V | ಅಂತರ ಗಾಂಧಾರ (ಗ೩) | .... | ೭ |
| VI | ಶುದ್ಧ ಮಧ್ಯಮ (ಮ೧) | .... | ೮ |
| VII | ಪ್ರತಿ ಮಧ್ಯಮ (ಮ೨) | .... | ೯ |
| VIII | ಪಂಚಮ (ಪ) | .... | ೧೦ |
| IX | ಶುದ್ಧ ಧೈವತ (ಧ೧) | .... | ೧೧ |
| X | ಚತುಶ್ರುತಿ ಧೈವತ (ಧ೨) | .... | ೧೨ |
| | ಮತ್ತು | | |
| | ಶುದ್ಧ ನಿಷಾದ (ನಿ೧) | .... | ೧೩ |
| XI | ಕೈಶಿಕ ನಿಷಾದ (ನಿ೨) | .... | ೧೪ |
| | ಮತ್ತು | | |
| | ಷಟ್ಶ್ರುತು ಧೈವತ (ಧ೩) | .... | ೧೫ |
| XII | ಕಾಕಲಿನಿಷಾ (ನಿ೩) | .... | ೧೬ |

ಹೀಗೆ ಚತುಶ್ಶ್ರುತಿ ರಿಷಭ (ರಿ೨) ನನ್ನು ಶುದ್ಧ ಗಾಂಧಾರವಾಗಿಯೂ (ಗ) ಸಾಧಾರಣ ಗಾಂಧಾರವನ್ನು (ಗ೨) ಷಟ್ಶ್ರುತಿ ರಿಷಭವಾಗಿಯೂ (ರಿ೩) ಹಾಗೆಯೇ ಚತುಶ್ಶ್ರುತಿ ಧೈವತವನ್ನು (ಧ೨) ಶುದ್ಧ ನಿಷಾದವಾಗಿಯೂ (ನಿ೧) ಕೈಶಿಕ ನಿಷಾಧ (ನಿ೨) ವನ್ನು ಷಟ್ಶ್ರುತಿ ಧೈವತವಾಗಿಯೂ (ಧ೩) ಕಲ್ಪಿಸಿಕೊಂಡು ಎಪ್ಪತ್ತೆರಡು ಮೇಳಕರ್ತಗಳನ್ನು ಕೊಟು ಕರ್ನಾಟಕ ಸಂಗೀತಕ್ಕೆ ಸ್ವರ್ಣಕಳಶವನ್ನಿಟ್ಟಿದ್ದಾನೆ. ಪಾಶ್ಚಿಮಾತ್ಯ ಸಂಗೀತ ಹಾಗೂ ಹಿಂದೂಸ್ತಾನಿ ಸಂಗೀತ ಪದ್ಧತಿಗಳೆರಡರಲ್ಲೂ ನಮ್ಮ ಶಂಕರಾಭರಣದ ಸಪ್ತ ಸ್ವರಗಳನ್ನು ಶುದ್ಧ ಸ್ವರಗಳೆಂದು ಪರಿಗಣಿಸಿದ್ದಾರೆ. ಹೇಗೆಂದು ನೋಡೋಣ.

ಹೊಂದಾಣಿಕೆ ಹೇಗಿದೆ ನೋಡಿ !

| ಪಾಶ್ಚಿಮಾತ್ಯ ಸಂಗೀತ | | ಹಿಂದ್ ಊಸ್ತಾನಿ ಸಂಗೀತ |
|---|---|---|
| I. A Flat | (ಧ೧) | ಕೋಮಲ್ ಧೈವತ್ (ಧ೧) |
| II. A Flat | (ಧ೨) | ಧೈವತ್ (ಧ೨) |
| III. B Flat | (ನಿ೨) | ಕೋಮಲ್ ನಿಷಾದ್ (ನಿ೨) |
| IV. B | (ನಿ೩) | ನಿಷಾದ್ (ನಿ೩) |
| V. Middle 'C' | (ಸ) | ಷಡ್ಜ (ಸ) |
| VI. D Flat | (ರಿ೧) | ಕೋಮಲ್ ರಿಷಭ್ (ರಿ೧) |
| VII. D | (ರಿ೨) | ರಿಷಭ್ (ರಿ೨) |
| VIII E Flat | (ಗ೨) | ಕೋಮಲ್ ಗಾಂಧಾರ್ (ಗ೨) |
| IX E | (ಗ೩) | ಗಾಂಧಾರ್ (ಗ೩) |
| XF | (ಮ೧) | ಮಧ್ಯಮ್ (ಮ೧) |
| XIF sharp | (ಮ೨) | ತೀವ್ರ ಮಧ್ಯಮ್ (ಮ೨) |
| XII G | (ಪ) | ಪಂಚಮ್ (ಪ) |

ಕಂಸ ( ) ಗಳಲ್ಲಿರುವ ಸ್ವರಗಳು ಕರ್ನಾಟಕ ಸಂಗೀತದ ಸ್ವರಗಳು ಈ ಎರಡು ಪದ್ಧತಿಗಳಲ್ಲೂ ವಿಕೃತಿ ಸ್ವರಗಳನ್ನು (flat-sharp) ಬಿಟ್ಟು (ಕೋಮಲ್ - ತೀವ್ರ) ಮಿಕ್ಕ ಸ್ವರಗಳೆಲ್ಲವು ನಮ್ಮ ಕರ್ನಾಟಕ ಸಂಗೀತ ಶಂಕರಾಭರಣದ ಸ್ವರಗಳೆಂಬುದನ್ನು ಗಮನಿಸಬಹುದು. ನಮ್ಮಲ್ಲಿ ಪ್ರಕೃತಿ ಸ್ವರಗಳೆಂದುಕೊಂಡಿರುವ ಷಡ್ಜ ಮತ್ತು ಪಂಚಮ ಸ್ವರಗಳು ಈ ಮೇಲಿನ ಎರಡು ಪದ್ಧತಿಗಳಲ್ಲೂ ಪ್ರಕೃತಿ ಸ್ವರಗಳಾಗಿಯೇ ಇವೆ ಎಂಬುದನ್ನು ಗಮನಿಸಬಹುದು.

ಈಗ ನಾವು ನಮ್ಮ ಮೂಲ ಪ್ರಶ್ನೆಯ ಕಡೆ ಗಮನ ಹರಿಸೋಣ. ಪಾಶ್ಚಾತ್ಯ ಸಂಗೀತದ ABCDEFG (notes) (ಧನಿ ಸರಿಗಮಪ) ಸ್ವರಗಳಲ್ಲಿ ನಮ್ಮ ಷಡ್ಜ ಸ್ವರಲಕ್ಕೆ ಸಮನಾದ C ಸ್ವರವು ‑ ಸಪ್ತಕದಲ್ಲಿ ಮೂರನೆಯದಾದರೂ 'middle-C' ಎಂದು ಏಕೆ ಕರೆಯುತ್ತಾರೆಂದು ನೋಡೋಣ.'

ಈ ಪ್ರಶ್ನೆಗೆ ಉತ್ತರಿಸಲು ಸಂಗೀತೋತ್ಪತ್ತಿಯ ಉಗಮ ಸ್ಥಾನಕ್ಕೆ ಹೋಗಬೇಕಾಗುತ್ತದೆ.

ವಾಸ್ತವವಾಗಿ ಹೇಳಬೇಕೆಂದರೆ ವಿಶ್ವ ಸಂಗೀತದ ಉಗಮವು ಅನೇಕ ಸಾವಿರ ವರುಷಗಳ ಮೊದಲೇ ಋಗ್ವೇದದ ಮಂತ್ರೋಚ್ಚಾರಣೆಯಿಂದಲೇ ಆಯಿತೆಂದು ಹೇಳಿದರೆ ತಪ್ಪಾಗಲಾರದು. ಈ ಮಂತ್ರೋಚ್ಚಾರಣೆಯನ್ನು ಉದಾತ್ತ, ಅನುದಾತ್ತ ಮತ್ತು ಸ್ವರಿತ ಎಂಬ ಮೂರು ಏರಿಕೆ ಇಳಿತೆಯ ಧ್ವನಿ ಚಾಲನೆಯಿಂದ ಪ್ರಾರಂಭವಾಗಿದೆ ಎಂಬುದು ಸಿದ್ಧಾಂತವಾಗಿದೆ. ಈ ಕಾಲದಲ್ಲಿ ಅವರು ಅದನ್ನು ಸಂಗೀತದ ಸ್ವರ ಕಲ್ಪನೆಯಿಂದಲೇ ಮಾಡಿದರೋ ಇಲ್ಲವೋ ಹೇಳಲಾರೆ. ಆದರೆ ಕಾಲಕ್ರಮದಲ್ಲಿ ಧ್ವನಿ ಚಾಲನೆಯು ನಮ್ಮ ಸ್ವರಗಳಲ್ಲಿ ಅನುದಾತ್ತ (ಕೈಶಿಕಿನಿಷಾದ - ನಿ೨), ಉದಾತ್ತ (ಷಡ್ಜ - ಸ) ಹಾಗೂ ಸ್ವರಿತ (ಚತುಶ್ಶ್ರುತಿ ರಿಷಭ - ರಿ೨), ಸ್ವರಗಳಿಗೆ ಹೊಂದಿಕೊಂಡವು ಋಗ್ವೇದದ ಮಂತ್ರಗಳೆಲ್ಲವನ್ನು ನಿ ಸರ ರಿ ಎಂಬ ಮೇಲೆ ಹೇಳಿದ ಸ್ವರಗಳಿಂದಲೇ ಉಚ್ಚಾರ ಮಾಡಲಾಗುತ್ತದೆ. ಅದಕ್ಕೆ ಒಂದು ಉದಾಹರಣೆಯ ಮಾದರಿ ನೋಡಿ.

| | | | | | | | |
|---|---|---|---|---|---|---|---|
| ಸಾ | ನೀ | ಸಾ | ನೀ | ಸಾ | ರೀ | | |
| ಯೋ | ಷಾಂ | ಪು | ಷ್ಪಂ | ವೇ | ದಾ | | |

| | | | | | | | |
|---|---|---|---|---|---|---|---|
| ಸಾ | ನೀ | ಸಾ | ಸ | ರಿ | ನೀ | ಸಾ | ರೀ |
| ಯೋ | ಪಾ | ಮಾ | ಯಾ | ತ | ನಂ | ವೇ | ದಾ |

| | | | | | | | |
|---|---|---|---|---|---|---|---|
| ನೀ | ಸ | ರಿ | ಸ | ಸಾ | ಸ | ಸ | ಸಾ |
| ಅ | ಯ | ತ | ನ | ವಾನ್ | ಭ | ವ | ತಿ |

ಇದೇ ರೀತಿಯಲ್ಲಿ ಋಗ್ವೇದದ ಎಲ್ಲ ಮಂತ್ರಗಳನ್ನು ಈ ಮೂರು ಸ್ವರಗಳಿಂದಲೇ ಉಚ್ಚಾರ ಮಾಡುವ ಪದ್ಧತಿಯು ಇಂದಿಗೂ ನಡೆದುಕೊಂಡು ಬಂದಿದೆ.

ನಂತರ ಯಜುರ್ವೇದದ ಕಾಲದಲ್ಲಿ ಆ ಮೂರು ಸ್ವರಗಳ ಎರಡು ಬದಿಯಲ್ಲೂ ಒಂದೊಂದು ಸ್ವರವನ್ನು ಸೇರಿಸಿ ಧ೨ ನಿ೨ ಸರಿ೨ ಗ೨ ಎಂಬ ಸ್ವರಗಳಿಂದ ಆ ವೇದದ ಮಂತ್ರೋಚ್ಚಾರ ಪ್ರಾರಂಭವಾಯಿತು.

ತದನಂತ ಸಾಮವೇದದ ಕಾಲದಲ್ಲಿ ಆಗ ಚಾಲನೆಯಲ್ಲಿ ಐದು ಸ್ವರಗಳ ಎರಡು ಬದಿಯಲ್ಲೂ ಪುನಃ ಒಂದೊಂದು ಸ್ವರವನ್ನು ಸೇರಿಸಿ ಪಧ೨ ನಿ೨ ಸರಿ೨ ಗ೨ ಮ ಎಂಬ ಸಪ್ತ ಸ್ವರಗಳಿಂದ ಮಂತ್ರೋಚ್ಚಾರಣೆ ಪ್ರಾರಂಭವಾಯಿತು. ಈ ಮೂರು ವೇದಗಳ ಮಂತ್ರೋಚ್ಚಾರಣೆಗಳಲ್ಲೂ ಆ ಸ್ವರ ಗುಚ್ಛಗಳಲ್ಲಿ ಷಡ್ಜ (ಸ) ಸ್ವರವು ಮಧ್ಯ ಸ್ವರವಾಗಿರುವುದನ್ನು ಗಮನಿಸಿ. ಈ ಸ್ವರಗಳು ನಮ್ಮ ಖರಹರಪ್ರಿಯ ಮೇಳಕರ್ತರಾಗದ ಸಪ್ತ ಸ್ವರಗಳಾಗಿವೆ. ಕಾಲ ಕ್ರಮೇಣ ಸಂಗೀತದಲ್ಲಿ ಷಡ್ಜ ಸ್ವರದ ಪ್ರಾಮುಖ್ಯತೆಯನ್ನು ಕಂಡುಕೊಂಡು ಹಿಂದಿದ್ದ ಪಂಚಮಾದಿ ಸಪ್ತ ಸ್ವರಗಳನ್ನು ಸರಿ೨ಗ೨ಮ೧ಪಧ೨ನಿ೨ ಎಂದು ಪರಿವರ್ತಿಸಿಕೊಂಡರು. ಈ ಸ್ವರಗಳ ಗ್ರಹಬೇಧದಿಂದ ಬೇರೆ ಬೇರೆ ರಾಗಗಳು ರೂಪುಗೊಂಡವು. ಹೇಗೆಂದರೆ

ಖರಹರಪ್ರಿಯ

| | | | | | | | | | | | | |
|---|---|---|---|---|---|---|---|---|---|---|---|---|
| | ಸ | ರಿ೨ | ಗ೨ | ಮ೧ | ಪ | ಧ೨ | ನಿ೨ | ಸ | ರಿ೨ | ಗ೨ | ಮ೨ | ಪ |
| ತೋಡಿ | | ಸ | ರಿ೧ | ಗ೨ | ಮ೧ | ಪ | ಧ೧ | ನಿ೨ | ಸ | ರಿ | ಗ | ಮ |
| ಕಲ್ಯಾಣಿ | | | ಸ | ರಿ೨ | ಗ೩ | ಮ೨ | ಪ | ಧ೨ | ನಿ | ಸ | ರಿ | ಗ |
| ಹರಿಕಂಬೋಜಿ | | | ಸ | ರಿ೨ | ಗ೩ | ಮ೧ | ಪ | ಧ೨ | ನಿ೨ | ಸ | ರಿ೨ | |
| ನಠಭೈರವಿ | | | | | ಸ | ರಿ೨ | ಗ೨ | ಮ೧ | ಪ | ಧ೧ | ನಿ೨ | ಸ |

ಹೀಗೆಯೇ ಗ೨ ಸ್ವರವನ್ನು ಷಡ್ಜ ಮಾಡಿಕೊಂಡು ಮುಂದುವರಿದರೆ ಶಂಕರಾಭರಣ ರಾಗವಾಗುವುದು. ಅದರಲ್ಲಿ ರಿಷಭವನ್ನು ಸ ಮಾಡಿಕೊಂಡು ಮುಂದುವರಿದರೆ ಪುನಃ ಖರಹರಪ್ರಿಯ ರಾಗವಾಗುತ್ತದೆ. ಹೀಗೆ ಗ್ರಹಭೇದಮಾಡಿದರೆ ತೋಡಿ, ಕಲ್ಯಾಣಿ, ಹರಿಕಾಂಬೋಜಿ, ನಠಭೈರವಿ, ಹಾಗೂ ಶಂಕರಾಭರಣ ರಾಗಗಳು ರೂಪುಗೊಳ್ಳುವುದೆಂಬುದನ್ನು ಮೇಲಿನ ನಕ್ಷೆ ಸಿದ್ಧಪಡಿಸುತ್ತದೆ. ವೆಂಕಟಮುಖಿಯು ರೂಪಿಸಿದ ಎಪ್ಪತ್ತೆರಡು ಮೇಳ ಕರ್ತರಾಗಗಳು, ಅವುಗಳಲ್ಲಿ ಒಂದು ಅಥವಾ ಎರಡು ಸ್ವರಗಳನ್ನು ವರ್ಜ್ಯ ಮಾಡಿದರೆ ಬರುವ ಬರುವ ಜನ್ಯ ರಾಗಗಳು ರೂಪುಗೊಂಡು ಇತೋಪ್ಯತಿಶಯವಾಗಿ ಬೆಳೆದು ಬಂದು ಇಂದಿನ ಬೃಹತಾಕಾರಕ್ಕೆ ಬಂದು ನಿಂತಿದೆ. ಈಗ ನಮ್ಮ ಮೂಲ ಪ್ರಶ್ನೆಗೆ ಬರೋಣ.

ನಮ್ಮ ಮೂರು ವೇದಮಂತ್ರಗಳ ಸ್ವರ ಕಲ್ಪನೆಯಲ್ಲಿ (ಷಡ್ಜ - ಸ) ವು ಮಧ್ಯ ಸ್ವರವಾಗಿರುವುದನ್ನು ಹಿಂದೆಯೇ ಹೇಳಿದ್ದೇನೆ. ಇಂದಿಗೂ ಈ ಮೂರು ವೇದಗಳ ಮಂತ್ರೋಚ್ಚಾರಣೆಯು ಸ್ವಲ್ಪವೂ ವ್ಯತ್ಯಾಸವಾಗದೆ ಆಗುತ್ತದೆ. ನನ್ನ ಅಭಿಪ್ರಾಯದಲ್ಲಿ ಯಜುರ್ವೇದದ ಧ ನಿ ಸ ರಿ ಗ ಸ್ವರಗಳು ಪಾಶ್ಚಾತ್ಯ ದೇಶಗಳಿಗೆ ಕಾಲಿಟ್ಟು ಅಲ್ಲಿ ಅದಕ್ಕೆ ಸಮನಾದ ABCDE ಎಂಬ ಸ್ವರಗಳು ರೂಪುಗೊಂಡು (ಷಡ್ಜ - ಸ) ಸ್ವರದ ಸರೀಕವಾದ C ನೋಟನ್ನು 'middle-c' ಎಂದು ನಾಮಕರಣ ಮಾಡಿ ಇಂದಿಗೂ ಅದನ್ನು ಉಳಿಸಿಕೊಂಡು ಬಂದಿದ್ದಾರೆ. ನಂತರ ಅವರಿಗೂ ಸಂಗೀತದಲ್ಲಿ ಸಪ್ತ ಸ್ವರಗಳ ಅನಿವಾರ್ಯತೆಯ ಅರಿವಾಗಿ ABCDEFG ಎಂಬ ಏಳು ಸ್ವರಗಳು ಆದಾಗಲೂ C ಸ್ವರದ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯಲು ಈಗಲೂ ಅದನ್ನು 'middle-c' ಎಂದೇ ಕರೆಯುತ್ತಿದ್ದಾರೆ.

ಅಲ್ಲದೆ ಇದರಲ್ಲಿ ಇನ್ನೊಂದು ವಿಷಯವನ್ನು ನಾವು ಗಮನಕ್ಕೆ ತಂದುಕೊಳ್ಳಬೇಕು. ಸಾಮವೇದದ ಪ ಧ ನಿ ಸ ರಿ ಗ ಮ ಸ್ವರಗಳನ್ನು ಹಿಗ್ಗಿಸಿ ಪ ಧ ನಿ ಸ ರಿ ಗ ಮ ಎಂದು ಮಾಡಿದಾಗ ಮಾನವನ ಕಂಠ ಶಕ್ತಿಗೆ ಅನುವಾಗುವ ಅತಿ ಕಡಿಮೆ ಧ್ವನಿಯ ಪ್ರತೀಕವಾದ ಮಂದ್ರ ಪಂಚಮ (ಪ) ಹಾಗೂ ತಾರಸ್ಥಾಯಿಯ ಅತ್ಯುಚ್ಚ ಧ್ವನಿಯಿರುವ ತಾರ ಮಾಧ್ಯಮ (ಮ) ಸ್ವರವು ಅಂದರೆ ಮಂದ್ರ ಪಂಚಮದಿಂದ ತಾರಸ್ಥಾಯಿಯ ಮಧ್ಯಮ ಸ್ವರದ ವರೆಗೆ ಲೀಲಾಜಾಲವಾಗಿ ವಿನ್ಯಾ, ಮಾಡಲು ಸಾಧ್ಯವೆಂದು ಸಾಬೀತಾಗುತ್ತದೆ. ಹನ್ನೊಂದನೆಯ ಶತಮಾನದಲ್ಲಿ ಸಂಗೀತ ರತ್ನಾಕರವೆಂಬ ಬೃಹದ್ಗ್ರಂಥವನ್ನು ಸಂಸ್ಕೃತ ಭಾಷೆಯಲ್ಲಿ ಬರೆದ ಸಾರಂಗ ದೇವನ ಕಾಲಕ್ಕಿಂತಲೂ ಮೊದಲು ಮೇಲೆ ಹೇಳಿದ ಇದೆ ಪದ್ಧತಿಯದ್ದು, ಅವನ ಕಾಲದ ವೇಳೆಗೆ ಷಡ್ಜ ಸ್ವರದ ಪ್ರಾಮುಖ್ಯತೆಯನ್ನು ಕಂಡುಕೊಂಡು ಆ ಷಡ್ಜ(ಸ) ಸ್ವರವನ್ನೇ ಮೂಲಸ್ವರವಾಗಿ ಸರಿಗಮಪಧನಿ ಎಂಬ ಸಪ್ತ ಸ್ವರಗಳ ಉಪಯೋಗ ಬಂದಿರಬಹುದೆಂದು ನನ್ನ ಅಭಿಪ್ರಾಯ.

ಹೀಗೆ ಪಾಶ್ಚಾತ್ಯ ಸಂಗೀತವು ನಮ್ಮ ಭಾರತೀಯ ಸಂಗೀತದ ಬೆಳವಣಿಗೆಯಿಂದ ಪ್ರಭಾವಗೊಂಡು ಬೆಳೆದು ಬಂದಿದೆಯೆಂದು ಹೇಳಿದರೆ ತಪ್ಪಾದೀತೇ?

- ವೈಣಿಕ ವಿದ್ವಾನ್ ಸಿ.ಕೆ. ಶಂಕರನಾರಾಯಣ ರಾವ್

# ವಿಚಾರದ ಬೆಳಕು - ಪುಸ್ತಕ ಪರಿಚಯ

ಲೇ: ಡಾ. ಜಿ.ಎನ್. ಉಪಾಧ್ಯ
ಪ್ರ. ಅಭಿಜಿತ್ ಪ್ರಕಾಶನ, ಮುಂಬಯಿ
ಪುಟಗಳು: ೧೭೪ ಬೆಲೆ: ರೂ. ೧೨೦/-

ಕನ್ನಡ ಸಾಹಿತ್ಯ ವಿಮರ್ಶೆ, ಸಾಂಸ್ಕೃತಿಕ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಡಾ. ಜಿ.ಎನ್. ಉಪಾಧ್ಯ ಅವರು ಬರೆದ ವಿಮರ್ಶಾ ಲೇಖನಗಳ ಸಂಚಯ 'ವಿಚಾರ ಬೆಳಕು' ಅವರ ವ್ಯಾಪಕ ಅಧ್ಯಯನಾಸಕ್ತಿಯ ಕೃತಿಯಾಗಿದೆ. ಬಿ.ಎ. ಸನದಿಯವರ 'ಬದುಕು ಬರಹ', 'ಕರ್ನಾಟಕ ಮಹಾರಾಷ್ಟ್ರ ಸಾಂಸ್ಕೃತಿಕ ಸಂಬಂಧ' 'ವಿಚಾರದ ಬೆಳಕು' ಈ ಮೂರು ಪುಸ್ತಕಗಳನ್ನು ಒಂದೇ ವರ್ಷ ಪ್ರಕಟಿಸಿದ ಜಿ.ಎನ್. ಉಪಾಧ್ಯ ಅವರು ಕರ್ನಾಟಕ ಮಹಾರಾಷ್ಟ್ರ ಸಾಂಸ್ಕೃತಿಕ ಸಂಬಂಧ ಸ್ವರೂಪವನ್ನು ಅರ್ಥಪೂರ್ಣವಾಗಿ ವಿವೇಚಿಸಿದ್ದಾರೆ. ಪ್ರಸ್ತುತ ಕೃತಿ 'ವಿಚಾರದ ಬೆಳಕು', 'ಸಂಸ್ಕೃತಿ ಚಿಂತನ, 'ಕೃತಿ ನೋಟ' ಮತ್ತು 'ಸಾಧಕರು' ಎಂಬ ಮೂರು ಭಾಗಗಳನ್ನೊಳಗೊಂಡಿದೆ.

ಸಾಹಿತ್ಯ ವಿಮರ್ಶೆ ಕೃತಿಯ ಮೌಲ್ಯಮಾಪನಕ್ಕೆ ಸೀಮಿತವಾಗದೆ, ಸಾಹಿತ್ಯದ ಸ್ವರೂಪ, ವ್ಯಾಖ್ಯಾನ, ವಿಶ್ಲೇಷಣೆಯ ಜೊತೆಗೆ ಸಾಂಸ್ಕೃತಿಕ ಅಧ್ಯಯನವನ್ನೂ ತನ್ನ ತೆಕ್ಕೆಗೆ ತೆಗೆದುಕೊಂಡಿರುವ ಶುಭ ಸೂಚನೆಯಾಗಿದ್ದು, ಅದಕ್ಕೆ ಅನುಗುಣವಾದ ಲೇಖನಗಳು ಈ ಕೃತಿಯಲ್ಲಿ ಅಂತಸ್ಥವಾಗಿವೆ ಎಂದು ಆರಂಭದಲ್ಲಿಯೇ ಲೇಖಕರು ಹೇಳಿದ್ದಾರೆ. ಸಂಸ್ಕೃತಿ ಚಿಂತನೆಯ ಮೊದಲ ಭಾಗದಲ್ಲಿ ಎಂಟು ಲೇಖನಗಳಿದ್ದು ಅದು ಮುಂಬಯಿ ಕನ್ನಡಿಗರ ಸಾಂಸ್ಕೃತಿಕ ಸಾಧನೆಯಿಂದ ಆರಂಭವಾಗಬೇಕಿತ್ತು. ಶಿವರಾಮ ಕಾರಂತರ ವೈಚಾರಿಕತೆಯನ್ನು ಅವರ 'ಮೂಕಜ್ಜಿಯ ಕನಸುಗಳು' ಕಾದಂಬರಿ ಹಾಗೂ ಇತರ ಲೇಖನಗಳ ವಿವೇಚನೆಗೆ ಎತ್ತಿಕೊಂಡಿದ್ದಾರೆ. ಶತಮಾನಗಳಿಂದ ಮುಂಬಯಿಯಲ್ಲಿ ನೆಲಸಿದ ಕನ್ನಡಿಗರು ಸಾಹಿತ್ಯ, ಕಲೆ, ಯಕ್ಷಗಾನ, ಉದ್ಯಮ, ಚಲನಚಿತ್ರ, ಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ಮಾಡಿದ ಸಾಧನೆಯಲ್ಲಿ ವಿವೇಚಿಸಿದ್ದಾರೆ. ಗೌರೀಶ ಕಾಯ್ಕಿಣಿಯವರ ಸಮಗ್ರ ಸಾಹಿತ್ಯ ವಾಙ್ಮಯದಲ್ಲಿ ಕನ್ನಡದ ಕಣ್ಮಣಿಗಳನ್ನು ಪ್ರೀತಿ, ಸಮಕಾಲೀನ ಸಾಹಿತಿಗಳ ಕೃತಿಗಳ ಬಗೆಗೆ ಗೌರೀಶರು ನಡೆಸಿದ ಸಾಹಿತ್ಯಸ್ವಾದ ನಮ್ಮ ಅರಿವಿಗೆ ಬರುತ್ತದೆ. ಗಿರೀಶ ಕಾರ್ನಾಡರ ಸಮಗ್ರ ನಾಟಕಗಳ ವಸ್ತುವನ್ನು ಇನ್ನೊಂದು ಲೇಖನದಲ್ಲಿ ಉಪಾಧ್ಯ ಪರಿಶೀಲಿಸುತ್ತಾರೆ. ನವೋದಯ ಕಾವ್ಯದಲ್ಲಿ ಸಮಾಜ ಸಂಸ್ಕೃತಿ ಲೇಖನವು ವಿಸ್ತಾರವಾದ ಆಲೋಚನೆಯನ್ನು ಅಪೇಕ್ಷಿಸುವ ವಸ್ತುವನ್ನು ಮಿತಗೊಳಿಸಿ ಹೇಳಿದಂತಾಗಿದೆ. ಕನ್ನಡ ಸಂಶೋಧೇಫೋ ಈಗ ಸಂಸ್ಕೃತಿ ಸಂಶೋಧನೆಯತ್ತ ಸಾಗಿರುವಾಗ ಹಿರಿಯ ಸಂಶೋಧಕ ಡಾ. ಕಲಬುರ್ಗಿ ಅವರು ತಮ್ಮ ಸಂಶೋಧನೆಯ ಲೇಖನಗಳಲ್ಲಿ ಸಾಂಸ್ಕೃತಿ ಚಿಂತನೆ ನಡೆಸುವ ಬಗೆಯನ್ನು ಉಪಾಧ್ಯ ವಿವೇಚಿಸುತ್ತಾರೆ. ಬೇಂದ್ರೆಯವರ ಕಾವ್ಯ ಮೀಮಾಂಸೆ ಮತ್ತು ವಿಮರ್ಶೆಯ ಕುರಿತಾದ ಸುದೀರ್ಘ ಲೇಖನವನ್ನು ಉಪಾಧ್ಯ ಬರೆದಿದ್ದಾರೆ. ಪುತಿನ ಲಲಿತ ಪ್ರಬಂಧಗಳು ಮರೆಯಲಾರದ ಪ್ರಬಂಧಗಳಲ್ಲಿ ಸೇರುತ್ತವೆ. ಅವರ ಈಚಲು ಮರದ ಕೆಳಗೆ ಧೇನುಕ ಪುರಾಣಗಳ ಬಗೆಗೂ ವಿವೇಚನೆ ಇದೆ.

ಕೃತಿ ನೋಟ ಎಂಬ ಎರಡನೆಯ ಭಾಗದಲ್ಲಿ ಡಾ. ಹಂಪನಾ ಅವರ ಸಂಶೋಧನಾ ಲೇಖನ ಸಂಪುಟ ಚಂದ್ರರೊಡೆಯ ಚೆಲುವು ಕುಸುಮಾಕರ ದೇವರಗೆಣ್ಣೂರ ಅವರ ಬಯಲ ಬಸಿರು ಕಾದಂಬರಿ, ಮಿತ್ರಾ ವೆಂಕಟರಾಜು ಅವರ ಹಕ್ಕಿ ಮತ್ತು ಆಕಾಶ ಸಣ್ಣ ಕತೆ, ಕೆ.ವಿ. ಸುಬ್ಬಣ್ಣನವರ ಅರೆಶತಮಾನದ ಅಲೆಬರಹಗಳು ಕೃತಿ ಸಮೀಕ್ಷೆಯ ಲೇಖನಗಳಿವೆ. ಕರ್ಕಿಯ ಸೂರಿ ವೆಂಕಟರಮಣ ಶಾಸ್ತ್ರಿಗಳು ಮುಂಬಯಿಯಲ್ಲಿ 'ಹವ್ಯಕ ಹಿತೇಚ್ಛು' ಕನ್ನಡದ ಮೊದಲ ಸಾಮಾಜಿಕ ನಾಟಕ 'ಇಗ್ಗಪ್ಪ ಹೆಗ್ಗಡೆ ವಿವಾಹ ಪ್ರಹಸನ' ರಚಿಸಿ ಪತ್ರಿಕೋದ್ಯಮ, ನಾಟಕ ಕ್ಷೇತ್ರದಲ್ಲಿ ಮಾಡಿದ ಸಾಧನೆಯನ್ನು ವಿವರವಾಗಿ ಪರಿಚಯಿಸಿದ್ದಾರೆ. ಕನ್ನಡ ಹನಿಗವನಗಳ ಸಾಮ್ರಾಟ ಎಚ್. ಡುಂಡಿರಾಜರ ಹನಿಗವನಗಳು ಹಾಗೂ ಅವರೊಡನೆ ನಡೆಸಿದ ಸಾಹಿತ್ಯ ಸಂವಾದ ಇಲ್ಲಿದೆ. ಅಂಕಣ ಸಾಹಿತ್ಯದ ಅಂದ ಹೆಚ್ಚಿಸಿದ ಮುಂಬಯಿಯ ಎಂ.ಬಿ. ಕುಕ್ಯಾನ್ ಮತ್ತು ಮರಾಠಿ ಸಾಹಿತ್ಯದ ರುಚಿ ಹತ್ತಿಸಿದ ರತ್ನಾಕರ ಶೆಟ್ಟಿಯವರ ಸಾಧನೆಯನ್ನೂ ಲೇಖಕರು ನಮ್ಮ ಗಮನಕ್ಕೆ ತಂದುಕೊಟ್ಟಿದ್ದಾರೆ.

'ವಿಚಾರದ ಬೆಳಕು' ಶೀರ್ಷಿಕೆಯ ಈ ವಿಮರ್ಶಾ ಲೇಖನ ಸಂಚಯದಲ್ಲಿ ಜಿ.ಎನ್. ಉಪಾಧ್ಯ ಮುಂಬಯಿಯ ಸಾಹಿತ್ಯಿಕ ಸಾಂಸ್ಕೃತಿಕ ಸಿರಿಯನ್ನೂ, ಕನ್ನಡ ಸಾಹಿತ್ಯದ ಧೀಮಂತರಾದ ಕಾರಂತ, ಕಾಯ್ಕಿಣಿ, ಕಾರ್ನಾಡ, ಕಲಬುರ್ಗಿ, ಪುತಿನ, ಸುಬ್ಬಣ್ಣ, ಹಂಪನಾ, ಡುಂಡಿರಾಜ್ ಮೊದಲಾದವರ ಸಾಹಿತ್ಯದ ನೋಟಗಳನ್ನು ಒದಗಿಸಿದ್ದಾರೆ. ಉಪಾಧ್ಯ ಅವರು ಈ ಲೇಖನಗಳುದ್ದಕ್ಕೂ ಸಹೃದಯರಾಗಿ ನಿಂತಿದ್ದಾರೆ. ವ್ಯಕ್ತಿ, ಕೃತಿ, ಸಂಸ್ಕೃತಿಯ ಚಿಂತನೆ, ಆಸ್ವಾದಕ್ಕೆ ಪಾತ್ರವಾಗಿದೆ. 'ವಿಚಾರದ ಬೆಳಕು' ಉಪಾಧ್ಯ ಅವರ ಚಿಂತನಶೀಲತೆಯ ಕೃತಿಯೂ ಆಗಿ ಸ್ವಾಗತಾರ್ಹವಾಗಿದೆ.

- ಡಾ. ಜಿ.ಎಂ. ಹೆಗಡೆ.

**STATEMENT ABOUT OWNERSHIP AND OTHER PARTICULARS OF NESARU TINGALOLE**

| | | | |
|---|---|---|---|
| 1. | Place of Publication | : | Mumbai |
| 2. | Perdiodicity of Publication | : | Monthly |
| 3. | Printer's Name | : | Aarati Art Printers |
| | Citizenship | : | India |
| | Address | : | 101, Varma Chambers, 11, Homji Street, Fort, Mumbai-400 001. |
| 4. | Publisher's Name | : | M. A. N. Prasad |
| | Citizenship | : | India |
| | Address | : | C/o. The Mysore Association, 393, Bhaudaji Road, Matunga, Mumbai-400 019. |
| 5. | Editor's Name | : | M. A. N. Prasad |
| | Citizenship | : | India |
| | Address | : | C/o. The Mysore Association, 393, Bhaudaji Road, Matunga, Mumbai-400 019. |
| 6. | Name & Address of the Owner of Newspaper | : | The Mysore Association, 393, Bhaudaji Road, Matunga, Mumbai-400 019. |

I, M. A. N. Prasad hereby declare that the particulars given above are true to best of my knowledge and belief.

# ಗಾದೆಗಳು - ಲೋಕೋಕ್ತಿಗಳು

**ಪ್ರಸ್ತಾವನೆ:** ಜನಪದ ಸಾಹಿತ್ಯದ ಒಂದು ಪ್ರಮುಖವಾದ ಮುಖ ಅದರ ಗಾದೆಗಳು. ಜನತೆಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವಿಶಿಷ್ಟವಾದ ಮತ್ತು ಪ್ರಭಾವಶಾಲಿಯಾದ ಸಾಧನಗಳಿವು. ಜನರ ಮನಸ್ಸಿನ ಬಹುಕಾಲದ ಅನುಭವ, ಅತಿ ಸಹಜವಾದ ರೀತಿಯಲ್ಲಿ ಅಡಕವಾದ ಮಾತುಗಳಲ್ಲಿ ಗಾದೆಗಳ ಮೂಲಕ ಹೊರ ಹೊಮ್ಮುತ್ತದೆ. ಭಾವಾರ್ಥಗಳ ಸ್ಫುಟತ್ವಕ್ಕೆ, ಶೀಘ್ರ ಬೋಧೆಗೆ, ಪರಿಣಾಮ ಸಾಧನೆಗೆ ಅವುಗಳಿಂದ ತುಂಬ ಲಾಭವೊದಗುತ್ತದೆ.

**"ಗಾದೆ" ಪದದ ವ್ಯುತ್ಪತ್ತಿ:** ಕನ್ನಡದಲ್ಲಿ ಗಾದೆಗೆ ಸಂವಾದಿಯಾದ ಮತ್ತೊಂದು ಪದ ನಾಣ್ಣುಡಿ. ನಾಡು+ನುಡಿ ನಾಣ್ಣುಡಿಯಾಗಿದೆ. ಗಾದೆ ಎಂಬ ಶಬ್ದ ರೂಢಿಗೆ ಬಂದನಂತರ ಅದು ಮರೆಯಾಯಿತು. ಈಗಂತು ಗಾದೆ ಎಂಬುದೇ ಸಾಮಾನ್ಯರ ನಾಲಗೆಯ ಮೇಲೂ ಕುಣಿದಾಡುತ್ತ ಅಚ್ಚಗನ್ನಡವಾಗುಳಿದಿದೆ. ಛಂದೋಪ್ರಕಾರವನ್ನು ಸೂಚಿಸುವ ಸಂಸ್ಕೃತದ ಗಾಥಾ ಶಬ್ದ ಪ್ರಾಕೃತದ ಮೂಲಕ ಕನ್ನಡಕ್ಕೆ ಬಂದಿದೆ. ಹಾಗೆ ಬರುವಾಗ ರೂಪದಲ್ಲಿ ಮಾತ್ರವಲ್ಲ, ಅರ್ಥದಲ್ಲಿಯೂ ವ್ಯತ್ಯಾಸವನ್ನು ಪಡೆದಿದೆ.

**ಗಾದೆ ಎಂದರೇನು?** "ಕೆಲವೇ ಕೆಲವು ಅರ್ಥಗರ್ಭಿತವಾದ ಮಾತುಗಳುಳ್ಳ, ಚಿಕ್ಕದೂ ಚೊಕ್ಕವಾದದ್ದೂ ಆದ ವಾಕ್ಯವೇ ಗಾದೆ".

"ಗಾದೆಗಳೆಂದರೆ ಜನ ಸಾಮಾನ್ಯರಲ್ಲಿ ಚಲಾವಣೆಯಲ್ಲಿರುವ, ಸಾರ್ವಜನಿಕ ಮುದ್ರೆ ಬಿದ್ದಿರುವ, ಪ್ರಚಲಿತವೂ ಸ್ವೀಕೃತ ಮೌಲ್ಯ ಭರಿತವೂ ಆಗಿರುವ ನಾಣ್ಯ. ಇದನ್ನು ಇನ್ನೂ ಸಂಕ್ಷಿಪ್ತವಾಗಿ ಹೇಳುವುದಾದರೆ ಜನತೆಯ ಸಾಮಾಜಿಕ ಪದವೇ ಗಾದೆಯೆನಿಸಿಕೊಳ್ಳುತ್ತದೆ".

''ನೂರಾರು ಜ್ಞಾನವೃದ್ಧರ, ವಿವೇಕಿಗಳ ಅನುಭವಿಗಳ ಅನುಭವಾಮೃತದ ರಸಾಯನವೇ ಗಾದೆ"

**ಬೇಕನ್ ಪ್ರಕಾರ:** ''ಒಂದು ರಾಷ್ಟ್ರದ ಪ್ರತಿಭೆ, ಬುದ್ಧಿ ಚಮತ್ಕಾರ ಮತ್ತು ಸತ್ವಗಳನ್ನು ಅದರ ಗಾದೆಗಳಲ್ಲಿ ಕಾಣಬಹುದು''.

ಒಟ್ಟಿನಲ್ಲಿ ಹಲವರ ಅನುಭವಗಳ ಸಾರ, ಸತ್ವಯುತವಾಗಿ ಮೂಡಿ ಬಂದ ಸೂತ್ರಪ್ರಾಯವಾದ ಉಕ್ತಿಗಳೇ ಗಾದೆಗಳೆನ್ನಬಹುದು.

ಗಾದೆಗಳಿಗೆ ಆಧಾರ, ಜನಾಂಗದಲ್ಲಿ ರೂಪಿತವಾಗಿರುವ ಅವರ ಜೀವನಕ್ರಮ, ಅವರ ಆಶೋತ್ತರಗಳು, ಶ್ರದ್ಧೆಗಳು, ಅವರ ಅರಿವು ಮತ್ತು ಆಚರಣೆಗಳು, ಅಂದರೆ ಅವರ ಸಮಗ್ರ ಸಂಸ್ಕೃತಿ.

ಅನೇಕ ಅನುಭವದಿಂದ ಮೂಡಿ ಒಬ್ಬನ ಮಾತಿನಲ್ಲಿ ಮೈವೆತ್ತು ಮತ್ತೆ ಹಲವರಿಂದ ಸಂಸ್ಕಾರವನ್ನು ಪಡೆದು, ಸಮಾಜದಲ್ಲಿ ಸೇರಿ ಹೋಗಿರುವ ಮುಕ್ತಕ ಪ್ರಾಯವಾದ ಉಕ್ತಿಗಳನ್ನು ಗಾದೆಗಳೆಂದು ಕರೆಯುತ್ತೇವೆ.

ಜೇಮ್ಸ್ ಎ. ಕೆಲ್ಲೋ ಹೇಳಿದ ಗಾದೆಯ ಪ್ರಮುಖ ನಾಲ್ಕು ಲಕ್ಷಣಗಳು:

1) ಸಂಕ್ಷಿಪ್ತತೆ
2) ಸಾರಗ್ರಾಹ್ಯತೆ
3) ತೀಕ್ಷ್ಣತೆ
4) ಜನಪ್ರಿಯತೆ

**ಗಾದೆಯ ಗುಣಗಳು:**

1) ಅನುಭವ ಸಾಂದ್ರತೆ
2) ಲೋಕಮಾನ್ಯತೆ
3) ಉಕ್ತಿರಮಣೀಯತೆ
4) ಸೂತ್ರಾತ್ಮಕತೆ

**ಗಾದೆಯ ಬಳಕೆ:** ಗಾದೆ ಬಳಕೆಯಿಂದ ಸಮಷ್ಟಿ ಸೃಷ್ಟಿಯೆಂದು ಹೇಳಬಹುದಾದರೂ ಮೂಲತಃ ವ್ಯಷ್ಟಿ ಸೃಷ್ಟಿಯೆಂಬುದು ಮಾತ್ರ ಸತ್ಯ.

ತತ್ವಶಾಸ್ತ್ರ, ವೇದಾಂತ, ಚರಿತ್ರೆ, ನೀತಿ ಶಾಸ್ತ್ರ ಮೊದಲಾದುವನ್ನೊಳಗೊಂಡು, ಅವುಗಳಿಗಿಂತ ಶೀಘ್ರ ಬೋಧಪ್ರದವಾಗಿರುವ ಸಮರ್ಥ ಜ್ಞಾನ ಮಾಧ್ಯಮಗಳಿವು. ಅವು ಶಾಸ್ತ್ರ ಪ್ರವೃತ್ತಿಯುಳ್ಳವಾದರೆ ಇವು ಪ್ರಯೋಗ ಪ್ರವೃತ್ತಿಯುಳ್ಳವು.

ಜನಜೀವನದ ಹಲವು ಹಂತಗಳಲ್ಲಿ ಹಲವು ಬಗೆಯ ಗಾದೆಗಳು ಪ್ರಚಲಿತವಾಗಿವೆ. ಅವರವರ ಕಸುಬಿಗೆ, ಸಂಸ್ಕಾರಕ್ಕೆ ಸಂಗ ಸಂಬಂಧಗಳಿಗೆ, ಶ್ರದ್ಧೆ ಭಾವನೆಗಳಿಗೆ ಅನುಗುಣವಾಗಿ ಗಾದೆಗಳು ಬೆಳೆಯುತ್ತವೆ.

ಅನೇಕ ಗಾದೆಗಳ ಹಿನ್ನಲೆಯಲ್ಲಿ ಯಾವುದೋ ಒಂದು ಘಟನೆ, ಸಾಮ್ಯತೆ, ಸೂಕ್ತಿ, ಸನ್ನಿವೇಶ, ಪ್ರಸಂಗ, ಒಗಟು, ಸ್ಥಳ ವಿಶೇಷ, ಪ್ರಾಣಿ ಸ್ವಭಾವ ಅಥವಾ ಕತೆ ಇರುತ್ತದೆ. ಕಾಲಾಂತರದಲ್ಲಿ ಅದು ಮರೆತು ಹೋಗುತ್ತದೆ. ಹಿನ್ನಲೆಯ ಪ್ರಸಂಗ ತಿಳಿದರಂತು ಆಯಾ ಗಾದೆಯ ಮಹತ್ವ ಸಂವೇದ್ಯವಾಗುತ್ತದೆ.

**ಗಾದೆಗಳ ವರ್ಗೀಕರಣ:** ಗಾದೆಗಳನ್ನು ವಸ್ತು ದೃಷ್ಟಿಯಿಂದಲೋ ನಿರೂಪಣೆಯ ದೃಷ್ಟಿಯಿಂದಲೋ ವಿಭಾಗಿಸುವುದು ಸುಲಭವಲ್ಲ. ಯಾವ ವಿಭಾಗಕ್ಕೂ ಸಿಕ್ಕದಿರುವಷ್ಟು ವ್ಯಾಪಕವಾದುದು ಅವುಗಳ ಸ್ವರೂಪ ವಿಧಿ ವಿಲಾಸ, ವಿನಯ, ದಯೆ ಇತ್ಯಾದಿ ಗುಣಗಳನ್ನು ಕುರಿತ ಗಾದೆಗಳೆಂದು ವಿಭಾಗಿಸಲು ಕೆಲವರು ಪ್ರಯತ್ನಿಸಿದ್ದಾರೆ. ಹಾಗೆಯೇ ಪುರಾಣ ಇತಿಹಾಸಗಳನ್ನು ಕುರಿತ ಗಾದೆಗಳು, ಚಾರಿತ್ರಿಕ ಘಟನೆಗಳನ್ನು ಕುರಿತವು, ಸ್ಥಳ ಪುರಾಣಗಳನ್ನು ಕುರಿತವು, ಮಾನವ ಸ್ವಭಾವ ನಿರೂಪಣೆಯ ಗಾದೆಗಳು ಇತ್ಯಾದಿಯಾಗಿಯೂ ವಿಭಾಗಿಸ ಬಹುದು. ಆದರೆ ಈ ವಿಭಾಗಗಳ ಸಂಖ್ಯೆ ಕೊನೆಯಿಲ್ಲದೆ ಬೆಳೆಯುತ್ತದೆ ಮತ್ತು ಎಲ್ಲ ಗಾದೆಗಳನ್ನೂ ಈ ವಿಭಾಗಗಳಲ್ಲಿ ಅಳವಡಿಸುವುದು ಅಸಾಧ್ಯವೋ ಎನಿಸುತ್ತದೆ.

ಸಂಸ್ಕೃತಿಯ ದೃಷ್ಟಿಯಿಂದ ಮುಖ್ಯವಾಗಿ ಮೂರು ವಿಭಾಗಗಳಲ್ಲಿ ಇವುಗಳನ್ನು ನೋಡಬಹುದು.

**1) ಜನಜೀವನದ ವಿವಿಧ ಉದ್ಯೋಗಗಳನ್ನು, ಕಸುಬುಗಳನ್ನು ಕುರಿತ ಗಾದೆಗಳು:** ಇವುಗಳಲ್ಲಿ ವ್ಯವಸಾಯ ಮುಖ್ಯವಾಗಿ ಮತ್ತು ಇತರ ಅನೇಕ ಗಾದೆಗಳನ್ನು ಸಮಾವೇಶಗೊಳಿಸಿ ಅವುಗಳ ಹಿನ್ನಲೆಯಲ್ಲಿ ರಚಿತವಾದ ಗಾದೆಗಳನ್ನು ನೋಡಲಾಗಿದೆ.

**2) ಧಾರ್ಮಿಕ ಜೀವನವನ್ನು ಕುರಿತ ಗಾದೆಗಳು:** ಧರ್ಮ ನಿಷ್ಠೆ, ವಿವಿಧ ಧರ್ಮಗಳೂ, ಆಚರಣೆಗಳೂ, ಪರಂಪರೆಗಳು ಇತ್ಯಾದಿ ಧಾರ್ಮಿಕ ಜೀವನದ ಸಾಧನೆಯನ್ನು ಕುರಿತ ಗಾದೆಗಳು.

**3) ಸಾಮಾಜಿಕ ಸಮಸ್ಯೆಗಳನ್ನು ಕುರಿತ ಗಾದೆಗಳು:** ಸಾಮಾಜಿಕ ಜೀವನ, ವಿಷಮತೆ, ಸಮತೆ, ಸಮನ್ವಯ, ಮೇಲು ಕೀಳು, ಜಾತಿ, ಮತ, ರಾಜಕೀಯ ಆರ್ಥಿಕ, ಸುಖ, ದುಃಖ, ನಲಿವು ಒಲವು, ವಿನೋದ, ಹಾಸ್ಯ, ಸಾಮಾಜಿಕ ಮತ್ತು ಸಾಂಸಾರಿಕ ಸಂಬಂಧಗಳು ಎಲ್ಲಾ ಈ ವಿಭಾಗದಲ್ಲಿ ಸೇರಿಸಬಹುದು.

**1) ಪ್ರಧಾನ ಉದ್ಯೋಗವಾದ ಕೃಷಿ (ಬೇಸಾಯ) ಹಾಗೂ ಇನ್ನಿತರ ವ್ಯವಸಾಯ ಕುರಿತ ಗಾದೆಗಳು:**

ಅಂಚು ಇಲ್ಲದ ಹೊಲವಿಲ್ಲ, ಸಂಚು ಇಲ್ಲದ ಮಾತಿಲ್ಲ.
ಅಡಿಕೆಟ್ಟು ಜನವಿಲ್ಲ, ಹೂಡಿಕೆಟ್ಟು ಗದ್ದೆಯಿಲ್ಲ.
ಆಗೋದು ಹೋಗೋದು ದೇವರಿಚ್ಛೆ, ಹೂಡೋದು ಬಿತ್ತೋದು ತನ್ನಿಚ್ಛೆ.
ಧನವಿಲ್ಲದಿದ್ದರೂ ದನವಿದ್ದರೆ ಸಾಕು.
ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ.
ಅಗಸ ಮಾಡಿದ್ದು ಬಟ್ಟೆಗೆ, ಅಕ್ಕಸಾಲೆ ಮಾಡಿದ್ದು ಅಗ್ಗಿಷ್ಟಿಕೆಗೆ.
ಈಡಿಗನ ಹೆಂಡತಿ ಎಂದಿದ್ದರೂ ಮುಂಡೆ.
ಅಕ್ಕನ ಬಂಗಾರವಾದರೂ ಅಕ್ಕಸಾಲಿಗ ಬಿಡ.
ನೇಯಿಗೆಯವನಾದರೂ ನಯವಿದ್ದರೆ ನಾಣ್ಯ ಸಿಕ್ಕೀತು.
ಸುಂಕದವ ಸುಳ್ಳ, ಬಣಜಿಗ ಕಳ್ಳ.

ಪುಣ್ಯವಂತ ಹಾಡಿದ್ದೇ ರಾಗ, ವೈದ್ಯ ಹೇಳಿದ್ದೇ ರೋಗ.

ಈ ಮೇಲಿನ ಗಾದೆಗಳು ಕೃಷಿಕಾರ(ಒಕ್ಕಲಿಗ), ಅಕ್ಕಸಾಲಿಗ, ಕುಂಬಾರ, ಈಡಿಗ, ಅಗಸ, ಬಣಜಿಗ, ನೇಕಾರ, ವೈದ್ಯರನ್ನು ಕುರಿತವುಗಳು.

**1) ಧಾರ್ಮಿಕ ಜೀವನವನ್ನು ಕುರಿತ (ಸಂಸ್ಕೃತಿಯ ದೃಷ್ಟಿಯಿಂದ) ಗಾದೆಗಳು:**

ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ.

ಈಸಬೇಕು ಇದ್ದು ಜೈಸಬೇಕು.

ದುಃಖದ ಮೇಲೆ ದುಃಖ, ಸುಖದ ಮೇಲೆ ಸುಖ.

ಅಳಿಯುವುದು ಕಾಯ, ಉಳಿಯುವುದು ಕೀರ್ತಿ.

ಹೇಳುವುದು ವೇದ, ಹಾಕುವುದು ಗಾಳ.

ಹೊರಗೆ ಭಕ್ತಿ, ಒಳಗೆ ಕತ್ತಿ

ಮಾಡುವುದು ಅನಾಚಾರ, ಮನೆ ಮುಂದೆ ವೃಂದಾವನ.

ಜಾತಿ ತಪ್ಪಿದರೂ ನೀತಿ ತಪ್ಪಬಾರದು.

ಸತ್ಯಕ್ಕೆ ಮಿಂಚಿದ ಪುಣ್ಯವಿಲ್ಲ, ಅಸತ್ಯಕ್ಕೆ ಮಿಂಚಿದ ಪಾಪವಿಲ್ಲ.

ಅಲ್ಲದ ಕೆಲಸಕ್ಕೆ ಹೋಗಿ, ಹಲ್ಲು ಮುರಿದುಕೊಂಡ.

ಸಿಟ್ಟು ತನಗೆ ಕೇಡು, ಸಮಾಧಾನ ಪರರಿಗೆ ಕೇಡು.

ಸಾಮಾಜಿಕ ಸಮಸ್ಯೆಗಳನ್ನು ಕುರಿತ ಗಾದೆಗಳು:

ಅಲ್ಪ ವಿದ್ಯಾ ಮಹಾಗರ್ವಿ

ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿಸಿಕೊಂಡ.

ಮತ ಬಿಟ್ಟರೂ ಮದ ಬಿಡಲಿಲ್ಲ.

ಅತಿ ಆಸೆ ಗತಿ ಕೆಡಿಸಿತು.

ಕಡುಕೋಪ ಬಂದಾಗ ತಡಕೊಂಡವನೇ ಜಾಣ

ತುಪ್ಪದ ಆಸೆಗೆ ಎಂಜಲು ತಿಂದ.

ಕಾಶಿಗೆ ಹೋಗಿ ತಂಗಿದರೂ ಕಾಸಿನ ಆಸೆ ಬಿಡಲಿಲ್ಲ.

ಆಶೆ ಅತಿ, ಆಯುಷ್ಯ ಮಿತಿ.

ಕೂತುಂಬವನಿಗೆ ಕುಡಿಕೆ ಹಣ ಸಾಲದು.

ಕಡಲೆ ಇದ್ದವರಿಗೆ ಹಲ್ಲಿಲ್ಲ, ಹಲ್ಲಿದ್ದವರಿಗೆ ಕಡಲೆಯಿಲ್ಲ.

ಸಮುದ್ರದ ಉಪ್ಪು ಕಾಡಿನ ನೆಲ್ಲಿಕಾಯಿ.

ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡ

ಎಂದೂ ಇಲ್ಲದ ಮಾಣಿ, ಅಮವಾಸೆ ದಿನ ಓದಲು ಕುಳಿತ

ಮಂಗಳವಾರ ಮಗಳ ಕಳುಹಿಸಬೇಡ. ಶುಕ್ರವಾರ ಸೊಸೆ ಕಳುಹಿಸಬೇಡ.

ಮಗಳನ್ನು ಹೆತ್ತು ಅಳಿಯನಿಗೆ ಕೊಟ್ಟೆ, ಮಗನನ್ನು ಹೆತ್ತು ಸೊಸೆಗೆ ಕೊಟ್ಟೆ.

ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು.

ವ್ಯಂಗ್ಯ ಪ್ರಧಾನ ಗಾದೆಗಳು: ಜೀವನದ ಎಲ್ಲ ಮುಖಗಳನ್ನು ಚುಚ್ಚಿ ಎಚ್ಚರಿಸುತ್ತದೆ.

ಉದಾ: ಇದ್ದ ಮಕ್ಕಳಿಗೆ ಕೂಳಿಲ್ಲ, ಮತ್ತೊಂದು ಕೊಡು ಶಿವರಾಯ.

ಮಗಳಿಗೆ ಧಾರೆ, ಅಪ್ಪನಿಗೆ ಶೋಭನ

ಉಣ್ಣೋದು ರಾಗಿ ಹಿಟ್ಟು, ಮೀಸೆ ಮೇಲೆ ಸಣ್ಣಕ್ಕಿ ಅನ್ನ.

ಬಂಡವಾಳ ಮೂರು ಕಾಸು ಬಡಿವಾರ ಆರು ಕಾಸು

ಅಂಬಲಿ ಕುಡಿಯುವವನಿಗೆ ಮೀಸೆ ಹಿಡಿಯುವವನೊಬ್ಬ

ಹೆತ್ತ ತಾಯಿಯನ್ನೇ ತಿನ್ನುವವಳು ಅತ್ತೆಯನ್ನು ಬಿಟ್ಟಾಳೆ?

ಮಂತ್ರಕ್ಕಿಂತ ಉಗುಳೇ ಹೆಚ್ಚು

ಎಷ್ಟು ದಕ್ಷಿಣೆಯೋ ಅಷ್ಟು ಪ್ರದರ್ಶಿಣೆ

ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿಕೊಂಡ.

ಸಾಂಸಾರಿಕ ಸಂಬಂಧಗಳ ಗಾದೆಗಳು:

★ ತಾಯಿ ಕಲಿಸಿದ ಊಟ, ತಂದೆ ಕಲಿಸಿದ ಬುದ್ಧಿ

★ ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು

★ ಅತ್ತೆ ಸತ್ತ ಆರು ತಿಂಗಳ ಮೇಲೆ ಸೊಸೆ ಕಣ್ಣಲ್ಲಿ ನೀರು ಬಂತು

★ ಅಳುವ ಹೆಂಗಸನ್ನೂ ನಗುವ ಗಂಡಸನ್ನೂ ನಂಬಬಾರದು.

★ ಹೆಣ್ಣಿನ ನೆಲೆ, ಕುದುರೆಯ ನಡೆ, ನೀರಿನ ಸೆಲೆ ಅರಿತವರಿಲ್ಲ.

ಆಹಾರ ಹಾಗೂ ಆರೋಗ್ಯದ ಮಿತಿಯನ್ನು ಕುರಿತ ಗಾದೆಗಳು:

ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.

ಒಪ್ಪತ್ತುಂಡವ ಯೋಗಿ, ಎರಡೊತ್ತುಂಡವ ಭೋಗಿ, ಮೂರೊತ್ತುಂಡವ ರೋಗಿ, ನಾಲ್ಕು ಹೊತ್ತು ಉಂಡವನನ್ನು ಹೊತ್ತುಕೊಂಡು ಹೋಗಿ

ಉಂಡು ಮಾವು, ಹಸಿದು ಹಲಸು

ಮಧ್ಯಾಹ್ನ ಉಂಡು ಮಲಗು, ರಾತ್ರಿ ಉಂಡು ನಡೆ

ಬಸುರಿ ಬಂದರೆ ಒನಕೆ ಕೊಡು, ಬಾಣಂತಿ ಬಂದರೆ ಮಣೆ ಕೊಡು.

ಅಧಿಕ ಪ್ರಸಂಗವನ್ನು ಮೂರ್ಖತನವನ್ನು ಕುರಿತ ಗಾದೆಗಳು:

ಎಲೆ ಎತ್ತೋ ಗುಂಡ ಅಂದರೆ, ಉಂಡವರೆಷ್ಟು ಜನ ಅಂದ

ಅಂಗೀ ಕೊಟ್ಟು ಭಂಗೀ ಸೇದಿ ಮಂಗನಾದ

ಒಣಮರಕ್ಕೆ ನೀರೆರೆದ ಹಾಗೆ

ಕಡಲೆಕಾಯಿ ಬಿತ್ತಿ ಕಾಗೆ ಕಾವಲು ಹಾಕಿದಂತೆ

ಸಮಯ ಸಾಧಕರ ಗಾದೆಗಳು:

ಗೆದ್ದೆತ್ತಿನ ಬಾಲ ಹಿಡಿ

ಹೌದಪ್ಪನ ಚಾವಡಿಯಲ್ಲಿ ಹೌದಪ್ಪ, ಅಲ್ಲಪ್ಪನ ಚಾವಡಿಯಲ್ಲಿ ಅಲ್ಲಪ್ಪ

ಹೊತ್ತು ಬಂದಂತೆ ಕೊಡೆ ಹಿಡಿ

ಕೊಟ್ಟವ ಕೋಡಂಗಿ ಇಸಗೊಂಡವ ವೀರಭದ್ರ

ರಾಮಾಯಣ ಮಹಾಭಾರತಗಳು, ಪುರಾಣಗಳು, ಧರ್ಮಗ್ರಂಥಗಳೂ ಜನಜೀವನದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿವೆ ಎಂಬುದಕ್ಕೆ ಕೆಲವು ಗಾದೆಗಳು ಸಾಕ್ಷಿ:

ಉತ್ತರನ ಪೌರುಷ ಒಲೆಯ ಮುಂದೆ

ಬಕಾಸುರನ ಊಟ ಕುಂಭಕರ್ಣನ ನಿದ್ದೆ

ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ

ಅಂಕೆಯಿಲ್ಲದ ಕಪಿ ಲಂಕೆ ಸುಟ್ಟಿತು

ಗಾಂಧಾರಿ ಈದಂತಾಗಬಾರದು.

ಕೆಲವು ಗಾದೆಗಳ ಮೂಲವನ್ನು ಒಗಟುಗಳಲ್ಲಿ ಗುರುತಿಸಬಹುದು:

ಬೆಳಗ್ಗೆ ನಾಲ್ಕು ಕಾಲು, ಮಧ್ಯಾಹ್ನ ಎರಡು ಕಾಲು, ಸಂಜೆ ಮೂರು ಕಾಲು- ಈ ಪ್ರಾಣಿ ಯಾವುದು? - ಮನುಷ್ಯ.

ಮಾನವನ ಇಡೀ ಬದುಕಿನ ನಾನಾವಸ್ಥೆಗಳನ್ನು ನಿರೂಪಿಸುವ ಅದ್ಭುತವಾದ ಗಾದೆ ಇದು. ಗಾದೆಗಳು ಸುಳಿಯುವ ಕತೆಗಳನ್ನು ನೋಡಿದಾಗ ಗಾದೆಗಳ ಪ್ರಪಂಚದ ವಿಸ್ತಾರವೂ, ಅವು ಸಾಂಕೇತಿಸುವ ಜೀವನಾನುಭವದ ಮಹತ್ವ ಅರ್ಥವಾಗುತ್ತವೆ. ಸೂಕ್ತಿ ರೂಪದಲ್ಲಿರುವ ಗಾದೆಗಳಲ್ಲಿ ನೀತಿ ಬೋಧೆ ಪ್ರಧಾನವಾಗಿರುತ್ತದೆ. ಉದಾಹರಣೆಗೆ ''ದುಷ್ಟರನ್ನು ಕಂಡರೆ ದೂರ ಸರಿ''. ಅವುಗಳಿಗೆ ರೂಪಕಗಳ ಸಂಸರ್ಗ ಪ್ರಾಪ್ತವಾದದ್ದಾದರೆ ಚಿತ್ರಮಯವಾಗಬಹುದು. ಪರಿಣಾಮಕಾರಿಯಾಗಿ ಜನಮನವನ್ನಾಕರ್ಷಿಸುತ್ತವೆ:

ಬೊಗಳುವ ನಾಯಿ ಕಚ್ಚುವುದಿಲ್ಲ.

ಶರಣರ ವಚನಗಳಲ್ಲಿ ನಾಣ್ಣುಡಿ :

ಜನ ಮರುಳೋ ಜಾತ್ರೆ ಮರುಳೋ

ಓದು ಕಾಲು ಬುದ್ಧಿ ಮುಕ್ಕಾಲು

ಬಂಜೆ ಬೇನೆಯರಿಯಳು

ಸಮಾರೋಪ: ಆಡುಮುಟ್ಟದ ಸೊಪ್ಪಿಲ್ಲವೆಂಬಂತೆ ಗಾದೆ ಮುಟ್ಟದ ವಸ್ತುವಿಲ್ಲ. ಗಾದೆಗಳು ಸರ್ವವ್ಯಾಪಿ. ಅವುಗಳ ಕುಕ್ಷಿಯಲ್ಲಿ ಬ್ರಹ್ಮಾಂಡವೇ ಅಡಗಿದೆ. ಗಾದೆಗಳು ಒಂದು ನಾಡಿನ ಸಂಸ್ಕೃತಿಗೆ ಆದರ್ಶವೂ ಅಹುದು, ದೂರದರ್ಶಿಯೂ ಅಹುದು. ಆರ್ಥಿಕ, ಸಾಮಾಜಿಕ, ಐತಿಹಾಸಿಕ, ಭಾಷಿಕ, ಸಾಂಸ್ಕೃತಿಕ ದೃಷ್ಟಿಯಿಂದ ಗಾದೆಗಳನ್ನು ನೋಡಬಹುದು. ದೈನಂದಿನ ಜೀವನದಲ್ಲಿ ಹಾಸು ಹೊಕ್ಕಾದ ಗಾದೆಗಳು ಮಾತಿನ ಸೊಗಸನ್ನು ಹೆಚ್ಚಿಸಬಲ್ಲವು. ಮಾತಿನ ಸುಖ ಕಾಣಿಸಿಕೊಳ್ಳುವುದು ಗಾದೆಯ ಮೂಲಕ. ಗಾದೆ ಬದುಕಿನ ಅವಿಭಾಜ್ಯ ಅಂಗವಾಗಿದೆ.

ಗ್ರಂಥ ಋಣ :

1) ಜಾನಪದ ಅಧ್ಯಯನ / ದೇ.ಜವರೇಗೌಡ

2) ಕರ್ನಾಟಕ ಸಂಸ್ಕೃತಿ ಸಮೀಕ್ಷೆ / ಎಚ್. ತಿಪ್ಪೇರುದ್ರಸ್ವಾಮಿ.

✍ ರಾಜಶ್ರೀ ಗಂಗಾಧರ ಇನಾಮದಾರ

ಎಂ.ಎ. ದ್ವಿತೀಯ ವರ್ಷ.

# GUIDING SPIRIT

✍ Dr. Girish Vichhivora

*Translated from Gujarati : by* **Bhavani**

Scorching heat of May. While a buffalo can comfortably rest, ruminating under the cool shades of a banyan tree or a simple villager can snooze off with his slippers as a makeshift pillow, where can a Mumbaiite find such solace? That too in the busy commercial lanes of Bhatbazar, which is always teeming with people and vehicles!

In such an atmosphere, there was a man sitting at the steps of one of the establishments. He may be around forty; with his arms around the legs folded at the knees; his head was bent, leaning over the arms; eyes were half open, listless; cloths dirty; overgrown beard; torn slippers; disheveled hair; his pulled up pajamas over the bent knee were displaying his rundown state of legs. He was sitting amidst all the humdrum, people shuttling around and shouting, in a totally detached manner. If at all a fly wanted to rest its wings on his face, it could sit without any fear. The man was so lost in his own thoughts and desires that he was least bothered by such trivial intrusions.

What sort of thoughts did he have? What were his desires? His body was in Bhatbazar, but his mind was circling around the far off land of Nalasopara, where he had a small room. His total worldly attachment was concentrated there. He was reflecting over that attachment, and drawing in his khaki beedi with the hope that in its smoky circle he might find a solution to his problem. He had taken loan from Multani to buy his truck. Now, besides the loan, the interest on it was also growing every minute into a huge mountain.

He had parked his truck for loading the supplies and was waiting at the steps. Having given up all other worries, he was concentrating on today's promise. It was the last day to pay the interest to Multani. Amount of interest was large. Pockets were empty.

From the world of his thoughts, suddenly he became active. Like a monkey, sitting on the compound wall pounces on a piece of bread and then sits on a branch of a near by tree to eat it in leisure, no sooner than his eyes fell on a small paper packet being kicked about by people on the footpath. He pounced to pick it up and opening the door of his truck, coolly sat inside. His eyes shone brightly.

Leisurely, he opened the packet. He wasn't surprised at his expectation proved right. As soon as he opened the packet, currency notes slipped out. Fourteen hundred in all. He closed the packet and sat quietly. Then he lit a new beedi and took a deep pull. Commented to self, 'well, today's problem is solved'. Drank up a cup of tea in a happy mood, wiped the sweat on the forehead and wound the kerchief around his neck. Fell into reverie, remembering his small house, loving wife, young kids and his parents.

One after the other, scenes scrolled in front of his eyes. His childhood tantrums - plans for absenting from school, smoking the stumps of beedi with friends using a stick freely in a trivial quarrel resulting in bleeding wound. Scenes kept moving. Green fields, overflowing streams, thick forests, friends, foes, everyone came and then came a scene. His parents were seen and the scene stopped there. Wouldn't move further. While he was looking at that scene, his vision went beyond it where he found another scene, at first in haze and then clearly visible. He could now focus on that scene. He became a little uneasy, wiped his sweat on the cheeks with the kerchief he had wound round his neck. His hands too perspired profusely and the kerchief became fully wet. What was the scene that upset him so much? He was there in a corner of that scene and in the opposite end was his mother. She was about to beat him with a raised stick. What for? He had stolen. He had brought home his classmate's pen. Mother was very angry and telling him to return the pen. If he didn't, she was prepared to clobber with the stick. He kept watching that scene and was lost in it. Noise around him woke him up from reverie.

Again he became calm. Spoke to self. "Who says I have stolen?" 'If you pick up something fallen on the road, how can it be called stealing?', 'Has anyone seen me picking up the packet?', 'Whose packet is it?', 'Whose money is it?'. By the time he uttered this, another scene came to his vision.

While he was sitting listlessly, a customer had come to the next shop to buy some supply. While he was putting the supply in his bag, that small packet had fallen out of it, on to the ground without that customer's knowledge. The customer went off with his bag. That packet was lying on the footpath with its face upturned. He had picked up that packet. Then he thought again. 'It's true that I picked up the packet. It was in my luck, that's why I got it. So many of them went away kicking it around. Why didn't anyone else pick it up?' 'When the luck favours, God provides like this in abundance.' He was immensely pleased.

Again his mind sat on a swing. How can a clock's pendulum remain static? It was keyed up. Again he thought, 'What will happen to that customer? He seemed to be a poor man like me. Must be an employee with somebody. What will his master think? Will he fire him from the job? What will happen to his family, his children?'. The pendulum kept swinging. Thought waves kept sweeping. Just as the notes peeping out of the half open packet were tempting and needed, so was the picture of the mother clearly seen in focus in front. Finally the pendulum lost momentum and stood static.

All the sweat vanished. He became active. Gulped down another cup of tea. Started smoking the beedi in great pleasure. Thought 'That customer isn't seen again. Chances of his returning are less. What is to be done with this money?' If he spent on any religious work, it will go in his account. But was he really fit for that? He was thinking like a philosopher. Finally he decided, 'There is a temple just in front. Let me put this in the donation box there. God has seen me picking up the packet. Hence let me give it in his custody'.

He sighed in relief and stretched out on the seat inside the truck. But relief was not in his fate for the day. Very shortly, that customer came back to the store. He looked extremely agitated and breathing heavily. He was very frightened. The man in the truck observed everything from the truck seat. He was now sure of the man who had dropped the packet. He got down from the truck. He asked that man what was the matter. He had almost become dumb, couldn't speak for a while. At last he broke

*(contd. pg. 11)*

## ಗ್ರಂಥಲೋಕ -ಕಾವ್ಯಗಂಗೆ - ಶತಮಾನ ಸ್ಮರಣೆ

ಮುಂಬಯಿ ವಿಶ್ವ ವಿದ್ಯಾಲಯದ ಕನ್ನಡ ವಿಭಾಗವು, ಕರ್ನಾಟಕ ಸಂಘ ಹಾಗೂ ಕನ್ನಡ ವಿಶ್ವ ವಿದ್ಯಾಲಯದ ಪ್ರಸಾರಾಂಗಗಳ ಸಹಯೋಗದೊಂದಿಗೆ ವಿಶಿಷ್ಟ ಕಾರ್ಯಕ್ರಮ ಸಂಕೀರ್ಣರವೊಂದನ್ನು ಇತ್ತೀಚೆಗೆ ಆಯೋಜಿಸಿತ್ತು. ಇದು ಪುಸ್ತಕ ಪ್ರದರ್ಶನ ಮತ್ತು ಮಾರಾಟ, ಕವಿಗೋಷ್ಠಿ ಹಾಗೂ ನಾಲ್ವರು ಪ್ರಾತಃ ಸ್ಮರಣೀಯರ ಶತಮಾನದ ನೆನಪುಗಳ ಸಂಗಮವಾಗಿತ್ತು.



ಚಿತ್ರದಲ್ಲಿ ಪ್ರೊ. ಬಿ.ಎ. ವಿವೇಕ ರೈ , ಮನೋಹರ ಎಂ. ಕೋರಿ, ಡಾ. ತಾಳ್ತಜೆ ವಸಂತ ಕುಮಾರ್, ಮಲ್ಲೇಪುರಂ ಜಿ. ವೆಂಕಟೇಶ್, ಟಿ.ವಿ. ವೆಂಕಟಾಚಲ ಶಾಸ್ತ್ರಿ, ಡಾ. ಅಮೃತಸೋಮೇಶ್ವರ, ಓಂದಾಸ್ ಕಣ್ಣಂಗಾರ್ ಮತ್ತು ಬಿ.ಜಿ. ನಾಯಕ್‌ರನ್ನು ಕಾಣಬಹುದು.

ಕನ್ನಡ ವಿಭಾಗದ ಬೆಳ್ಳಿ ಹಬ್ಬದ ಆಚರಣೆಗಳ ಅಂಗವಾಗಿ ನಡೆದ ಈ ಕಾರ್ಯಕ್ರಮ ಸರಣಿಯನ್ನು ಕನ್ನಡ ವಿಶ್ವ ವಿದ್ಯಾಲಯದ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈಯವರು ಉದ್ಘಾಟಿಸಿದರು. ದಿನಾಂಕ 28ರಂದು ಕರ್ನಾಟಕ ಸಂಘದಲ್ಲಿ ನೆರವೇರಿದ ಈ ಸಮಾರಂಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದ




ದೆಹಲಿ ಕನ್ನಡಿಗ ಪತ್ರಿಕೆ ಸಂಪಾದಕ ಬಾ. ಸಾಮಗ ಅವರನ್ನು ಪಾಂಡಿಚೇರಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಮತ್ತು ಸಮ್ಮೇಳನದಲ್ಲಿ ಡಾ. ಕೆ. ವಾಗೀಶ್ ಅವರು ಶಾಲು ಹೊದಿಸಿ ಸನ್ಮಾನಿಸಿದರು.

## ಸುತ್ತ ಮುತ್ತ

ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರು ಮುಖ್ಯ ಅತಿಥಿಗಳಾಗಿದ್ದರು. ಮೈಸೂರು ವಿಶ್ವ ವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿಯವರು ಇದರ ಅಧ್ಯಕ್ಷತೆಯನ್ನು ವಹಿಸಿದ್ದರು.

ಶ್ರೀಮತಿ ಜಯಲಕ್ಷ್ಮಿ ಪರ್ವತೀಕರ್ ಅವರ ಸ್ವಾಗತಗೀತೆ, ಡಾ. ತಾಳ್ತಜೆ ವಸಂತ ಕುಮಾರರ ಪ್ರಾಸ್ತಾವಿಕ ಭಾಷಣ, ಡಾ. ರೈಯವರಿಗೆ ಸನ್ಮಾನ-ಗೌರವಾರ್ಪಣೆ, ಶ್ರೀ ಓಂದಾಸ್ ಕಣ್ಣಂಗಾರ್ ಅವರ ವಂದನಾರ್ಪಣೆಗಳು ನಡೆದ ಈ ಕಾರ್ಯಕ್ರಮವು ಶ್ರೀಮತಿ ಮಮತಾ ರಾವ್ ಅವರಿಂದ ನಿರೂಪಿಸಲ್ಪಟ್ಟಿತು. ಶ್ರೀ ಎಂ.ಎಂ. ಕೋರಿ, ಶ್ರೀ ಬಿ.ಜಿ. ನಾಯಕ್ ಹಾಗೂ ಡಾ. ಅಮೃತ ಸೋಮೇಶ್ವರರು ವೇದಿಕೆಯಲ್ಲಿ ಉಪಸ್ಥಿತರಾಗಿದ್ದರು.

ಅನಂತರ, ಡಾ. ಅಮೃತಸೋಮೇಶ್ವರರ ಅಧ್ಯಕ್ಷತೆ ಹಾಗೂ ಮುಂಬಯಿಯ ಮಹತ್ವದ ಕವಿಗಳ ಕವನ ಪ್ರಸ್ತುತಿಗಳೊಂದಿಗೆ ಕವಿಗೋಷ್ಠಿಯು ನಡೆಯಿತು. ಇದರ ನಿರ್ವಹಣೆಯನ್ನು ಶ್ರೀ ದಿನೇಶ ಶೆಟ್ಟಿಯವರು ಮಾಡಿದರು.

ದಿನಾಂಕ 25 ರಂದು ಕರ್ನಾಟಕ ಸಂಘದ ಸಮರಸ ಭವನದಲ್ಲಿ ಶತಮಾನ ಸ್ಮರಣೆಯ ವಿಶೇಷ ಉಪನ್ಯಾಸಗಳು ಜರಗಿದುವು. ಇದರಲ್ಲಿ ಡಾ. ಭೀಮರಾವ್ ಚಿಟಗುಪ್ಪಿಯವರ ಬಗೆಗೆ ಡಾ. ಸುನೀತಾ ಶೆಟ್ಟಿಯವರೂ, ಪ್ರೊ. ಡಿ.ಎಲ್. ನರಸಿಂಹಾಚಾರ್ಯರ ವೈಶಿಷ್ಟ್ಯಗಳ ಕುರಿತು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರೂ, ಪ್ರೊ. ತೀ. ನಂ. ಶ್ರೀಕಂಠಯ್ಯನವರ ಕೊಡುಗೆಗಳ ಬಗೆಗೆ ಡಾ. ತೀ.ನಂ. ಶಂಕರನಾರಾಯಣ ಅವರೂ ಪ್ರೊ. ಎಂ. ಮರಿಯಪ್ಪ ಭಟ್ಟರ ಸಾಧನೆಗಳ ಕುರಿತು ಡಾ. ಉಪ್ಪಂಗಳ ರಾಮಭಟ್ಟರೂ ಮೌಲಿಕವಾದ ವಿಚಾರಗಳನ್ನು ಮಂಡಿಸಿದರು. ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿಯವರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಇದರ ನಿರ್ವಹಣೆಯನ್ನು ಡಾ. ಗಿರಿಜಾ ಶಾಸ್ತ್ರಿಯವರು ನಡೆಸಿಕೊಟ್ಟರು.

## ನಾರಾಯಣ ಮಧ್ಯಸ್ಥ ಅವರಿಗೆ ಪಿಎಚ್‌ಡಿ ಪದವಿ



ಮುಂಬಯಿ, ಶ್ರೀ ನಾರಾಯಣ ಮಧ್ಯಸ್ಥ ಅವರು ಬರೆದು ಸಲ್ಲಿಸಿದ "ಕರ್ಕಿ ಹಾಸ್ಯಗಾರ ಮೇಳ, ಸಂಪ್ರದಾಯ ಮತ್ತು ಪ್ರಯೋಶೀಲತೆ" ಎಂಬ ಸಂಶೋಧನ ಮಹಾ ಪ್ರಬಂಧವನ್ನು ಮನ್ನಿಸಿ ಮುಂಬಯಿ ವಿಶ್ವ ವಿದ್ಯಾಲಯ ಅವರಿಗೆ ಕನ್ನಡದಲ್ಲಿ ಪಿಎಚ್‌ಡಿ ಪದವಿಯನ್ನು ನೀಡಿದೆ.

ಶ್ರೀ ನಾರಾಯಣ ಮಧ್ಯಸ್ಥ ಅವರು ಕನ್ನಡ ವಿಭಾಗದ ಉಪನ್ಯಾಸಕ ಡಾ. ಜಿ.ಎ. ಉಪಾಧ್ಯ ಅವರ ಮಾರ್ಗ ದರ್ಶನದಲ್ಲಿ ಮಹಾಪ್ರಬಂಧವನ್ನು ಸಿದ್ಧಪಡಿಸಿ ಮುಂಬಯಿ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿದರು. ಪ್ರಕೃತ ಇವರು ಉತ್ತರ ಕನ್ನಡದ ಮುರ್ಡೇಶ್ವರದ ಆರ್.ಎನ್. ಶೆಟ್ಟಿ ಜೂನಿಯರ್ ಕಾಲೇಜಿನಲ್ಲಿ ಉಪನ್ಯಾಸಕ.

*ನೇಸರುವಿನ ಓದುಗರಿಗೆಲ್ಲರಿಗೂ ಹೊಸ ಸಂವತ್ಸರದ ಯುಗಾದಿ ಹಬ್ಬದ ಶುಭಾಶಯಗಳು*

## GUIDING SPIRIT

*(contd. from pg. 10)*

down and told everything. He had become totally upset with the fear of losing his job.

After having confirmed how much money, what were the denomination of notes and such other details, he picked the packet lying by the side. By then a small group of people had gathered around. He gave the packet to that customer and told him to count the amount. That man was so rushed by his feelings that he started panting while searching for words to express his gratitude. Again the truck driver came to his help. He took that tearful customer to the restaurant and made him comfortable. Both drank tea together. Returning the hundred rupee note given by the customer in gratitude, he said in a very casual manner, 'you too do the same some time in future.'

Customer left. Having loaded the truck this man also left. His feelings were mixed. He was happy to have done the right thing by returning the money, but at the same time was worried about facing Multani.

In the evening, he pleaded with Multani for some more time which was granted. That night he slept peacefully.

MH/MR/ME/093/06-08
Date of Posting : 10-03-2006

## “ಸೀಮಾತೀತ ಸಾಹಿತ್ಯ - ಮೇರೆಗಳನ್ನು ಮೀರುವ ಕಲೆ” - ಡಾ. ಅಮೃತ ಸೋಮೇಶ್ವರ

ಎಲ್ಲಾ ಬಗೆಯ ಎಲ್ಲೆ ಕಟ್ಟುಗಳನ್ನು ಮೀಟಿ ನಿಲ್ಲುವುದೇ ನಿಜವಾದ ಕಲೆ ಸಾಹಿತ್ಯಗಳ ಲಕ್ಷಣವಾಗಿದೆ. ಹೃದಯ ಸಂವಾದಕ್ಕೆ ಸನ್ನದ್ಧವಾಗುವುದರಲ್ಲಿಯೇ ಅವುಗಳ ಸಾಫಲ್ಯವಾಗುವುದು. ಅವುಗಳನ್ನು ನಿರ್ದಿಷ್ಟ ಸಮಾಜ ಸಂವಾದಿಯಾಗಿ ನೋಡುವುದು ಸರಿಯಲ್ಲ ಎಂದು ಹಿರಿಯ ಕವಿ ಜಾನಪದ ವಿದ್ವಾಂಸ ಡಾ. ಅಮೃತ ಸೋಮೇಶ್ವರರು ಹೇಳಿದರು.

ಇತ್ತೀಚೆಗೆ ಮೈಸೂರು ಅಸೋಸಿಯೇಷನ್‌ನ ಸಭಾಂಗಣದಲ್ಲಿ ಹವ್ಯಕ ವೆಲ್ಫೇರ್ ಟ್ರಸ್ಟ್ ಮತ್ತು ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಸಮಾರಂಭದಲ್ಲಿ ಶ್ರೀ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿಯನ್ನು ಸ್ವೀಕರಿಸುತ್ತಾ ಅವರು ಈ ಪ್ರತಿಕ್ರಿಯೆಯನ್ನು ನೀಡಿದರು. ಹವ್ಯಕ ಸಮಾಜದವನಲ್ಲ ತಮಗೆ ಈ ಪುರಸ್ಕಾರವು ಸಂದಿರುವುದಕ್ಕೆ ಅವರು ಅಪಾರ ಸಂತಸವನ್ನು ವ್ಯಕ್ತಪಡಿಸಿದರಲ್ಲದೆ ಈ ಸಂದರ್ಭದಲ್ಲಿ ತನಗೆ ವಿಶೇಷ ಪ್ರಶಸ್ತಿಯನ್ನು ನೀಡಿ ''ಕರ್ನಾಟಕ ಮಲ್ಲ'' ಹಾಗೂ ತಮ್ಮನ್ನು ಸನ್ಮಾನಿಸಿದ ಸ್ಥಳೀಯ ಸಂಘ ಸಂಸ್ಥೆಗಳನ್ನು ಅವರು ಕೃತಜ್ಞತೆಗಳೊಂದಿಗೆ ಸ್ಮರಿಸಿಕೊಂಡರು.


ಅಭಿನಂದನಾ ಭಾಷಣ ಮಾಡಿದ ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಕೆ. ಚಿನ್ನಪ್ಪ ಗೌಡರು, ತಾವು ಬೆಳೆಯುವುದರೊಂದಿಗೆ ಸುತ್ತನ್ನೂ ಬೆಳೆಸುವ ಡಾ. ಅಮೃತರ ಕ್ರಮವನ್ನು ಪ್ರಶಂಸಿಸಿದರು. ಶ್ರೀಮತಿ ನರ್ಮದಾ ಸೋಮೇಶ್ವರರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಶ್ರೀ ಶಿಮುಂಜೆ ಪರಾರಿಯವರು ಪ್ರಸ್ತುತ ಪ್ರಶಸ್ತಿಯ ಧ್ಯೇಯೋದ್ದೇಶಗಳನ್ನು ವಿವರಿಸಿದರು. ಇದೆ ಸಂದರ್ಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಡಾ. ಶಾಲಿನಿ ರಘುನಾಥರು ಶ್ರೀ ಸೂರಿಯವರ ವ್ಯಕ್ತಿತ್ವ -ಕರ್ತೃತ್ವಗಳ ಬಗೆಗೆ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಅಖಿಲ ಹವ್ಯಕ ಮಹಾ ಸಭಾದ ಅಧ್ಯಕ್ಷ ಶ್ರೀ ಕಜೆ ಈಶ್ವರ ಭಟ್ ಹಾಗೂ ಹವ್ಯಕ ಸಮಾಜ ಅಧ್ಯಯನ ಕೇಂದ್ರದ ಶ್ರೀ ನಾರಾಯಣ ಶ್ಯಾನಭಾಗರು ಶುಭಾಶಂಸನೆ ಮಾಡಿದರು.

ಈ ಸಮಾರಂಭದಲ್ಲಿ ಶ್ರೀ ಗಜಾನನ ಯಾಜಿ ಯವರ 'ನೆನಪು ನೆನಹು' ಆತ್ಮಚರಿತ್ರೆಯನ್ನು ಶ್ರೀ ಕೈರಬೆಟ್ಟು ವಿಶ್ವನಾಥ ಭಟ್ ಅವರು ಬಿಡುಗಡೆ ಮಾಡಿದರು. ಡಾ. ವ್ಯಾಸರಾವ್ ನಿಂಜೂರು ಅವರು ಈ ಕೃತಿಯ ಪರಿಚಯ ಮಾಡಿಕೊಟ್ಟರು.

ಹವ್ಯಕ ವೆಲ್ಫೇರ್ ಟ್ರಸ್ಟ್‌ನ ಅಧ್ಯಕ್ಷರಾಗಿರುವ ಶ್ರೀಮತಿ ವಿಮಲಾ ಭಟ್ಟರ ಅಧ್ಯಕ್ಷತೆಯಲ್ಲಿ ಈ ಕಾರ್ಯಕ್ರಮವು ಶ್ರೀಮತಿ ಜ್ಯೋತಿ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡಿತು. ಡಾ. ತಾಳ್ತಜೆ ವಸಂತ ಕುಮಾರರು ಪ್ರಾಸ್ತಾವಿಕ ಭಾಷಣ ಮಾಡಿದರು. ಡಾ. ರಘುವೀರ ಭಟ್ಟರ ಸ್ವಾಗತ ಭಾಷಣ, ಶ್ರೀ ಎಸ್. ಆರ್. ಹೆಗಡೆಯವರ ಸಂದೇಶ ವಾಚನ, ಶ್ರೀ ಪದ್ಮನಾಭ ಶೆಟ್ಟಿ ಸಿದ್ಧಕಟ್ಟೆ ಅವರಿಂದ ಪ್ರೊ. ಅಮೃತ ಸೋಮೇಶ್ವರರ ಕವನ ಪ್ರಸ್ತುತಿ, ಶ್ರೀ ವಿಶ್ವನಾಥ ದೊಡ್ಮನೆ ಅವರಿಂದ ಪ್ರಶಸ್ತಿ ಪತ್ರವಾಚನಗಳು ಈ ಸಮಾರಂಭದಲ್ಲಿ ನಡೆದವು. ಶ್ರೀಮತಿ ಸುಮನ್ ಚಿಪ್ಳೂಣ್‌ಕರ್ ಅವರ ವಂದನಾರ್ಪಣೆಯೊಂದಿಗೆ ಸಂಪನ್ನವಾದ ಇದರ ನಿರ್ವಹಣೆಯನ್ನು ಡಾ. ಮಣಿಮಾಲಿನಿ ವಿ.ಕೆ. ಅವರು ಮಾಡಿದರು. ಅನಂತರ ಬೆಂಗಳೂರಿನ ಹವ್ಯಕ ಕಲಾವಿದರಿಂದ ಕರ್ಕಿ ಶಾಸ್ತ್ರಿಯವರ ನಾಟಕ 'ಇಗ್ಗಪ್ಪ ಹೆಗ್ಗಡೆ ವಿವಾಹ ಪ್ರಹಸನ'ವು ಪ್ರದರ್ಶಿತವಾಯಿತು.

## ಭರತ್‌ಕುಮಾರ್ ಪೊಲಿಪು ಅವರಿಗೆ ಕರ್ನಾಟಕ ನಾಟಕ ಅಕಾಡೆಮಿ ಪುರಸ್ಕಾರ



ರಂಗಕರ್ಮಿ, ಸಂಘಟಕ, ಲೇಖಕ ಹಾಗೂ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಭರತ್ ಕುಮಾರ್ ಪೊಲಿಪು ಅವರಿಗೆ ಈ ಬಾರಿಯ ಕರ್ನಾಟಕ ಸರಕಾರದ ನಾಟಕ ಅಕಾಡೆಮಿ ಪುರಸ್ಕಾರ ಲಭಿಸಿದೆ. ನಾಟಕ ಅಕಾಡೆಮಿಯ ಮಾಸ್ಟರ್ ಕೆ. ಹಿರಣ್ಣಯ್ಯ ಅವರ ದತ್ತಿನಿಧಿ ಪುರಸ್ಕಾರಕ್ಕೆ ಇವರು ಆಯ್ಕೆಯಾಗಿದ್ದಾರೆ.

ಮೂಲತಃ ದಕ್ಷಿಣ ಕನ್ನಡದ ಪೊಲಿಪು ನಿವಾಸಿಯಾದ ಭರತ್‌ಕುಮಾರ್ ಅವರು ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಪದವಿಯನ್ನು ಪೂರೈಸಿ ಮುಂಬಯಿ ವಿ.ವಿ. ಕನ್ನಡ ವಿಭಾಗದಲ್ಲಿ ಎಂ.ಎ. ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಮುಗಿಸಿದ್ದಾರೆ.

ಕಾಲೇಜು ದಿನಗಳಿಂದಲೇ ನಾಟಕದ ಆಸಕ್ತಿಯನ್ನು ಹೊಂದಿ, 'ವರ್ಷದ ಅತ್ಯುತ್ತಮ ಪ್ರತಿಭಾವಂತ ಕಲಾವಿದ' ಎಂಬ ಗೌರವಕ್ಕೆ ಪಾತ್ರರಾಗಿದ್ದರು. ಖ್ಯಾತ ರಂಗನಿರ್ದೇಶಕರಾದ ಬಿ. ಆರ್. ನಾಗೇಶ್, ಉದ್ಯಾವರ ಮಾಧವಾಚಾರ್ಯ, ಪ್ರಸನ್ನ, ಶ್ರೀನಿವಾಸ ಪ್ರಭು ಅವರ ಗರಡಿಯಲ್ಲಿ ಪಳಗಿದ ಭರತ್‌ಕುಮಾರ್ ಅನೇಕ ರಂಗ ತರಬೇತಿ ಶಿಬಿರ, ನಾಟಕ ರಚನಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

ಅವರು ರಚಿಸಿದ ತುಳುನಾಟಕ 'ಅರುಂಧತಿ'ಗೆ ದಿ. ರತ್ನವರ್ಮ ಹೆಗ್ಗಡೆ ಪ್ರಶಸ್ತಿ ಲಭಿಸಿದೆ. ಮುಂಬಯಿ ರಂಗಭೂಮಿಯಲ್ಲಿ ಕಳೆದ ಎರಡು ದಶಕಗಳಿಂದ ಕ್ರಿಯಾಶೀಲರಾಗಿರುವ ಅವರು ಈಗಾಗಲೇ 'ರಾವಿ ನದಿ ದಂಡೆಯಲ್ಲಿ', 'ಆಷಾಢದ ಒಂದು ದಿನ', 'ನೀ ಮಾಯೆಯೊಳಗೋ', 'ಪೊಲೀಸರಿದ್ದಾರೆ ಎಚ್ಚರಿಕೆ', 'ಗುಮ್ಮನೆಲ್ಲಿಹ, ತೋರಮ್ಮ', 'ಬದುಕ ಮನ್ನಿಸು ಪ್ರಭುವೇ', 'ಸಾಯೋ ಆಟ', 'ಯಾವ ನದಿ ಯಾವ ಪಾತ್ರ', 'ಗಿಡಗಳ ಜೊತೆ ಮಾತನಾಡುವ ಹುಡುಗ', 'ಉರಿದವರು', 'ಟಿ. ಪ್ರಸನ್ನನ ಗೃಹಸ್ಥಾಶ್ರಮ', 'ಶಾಂಡಿಲ್ಯ ಪ್ರಹಸನ', 'ಅಂಬೆ', 'ಮಗತೃಷ್ಣಾ' ಮುಂತಾದ ಪರಿಣಾಮಕಾರಿ ನಾಟಕಗಳನ್ನು ನಿರ್ದೇಶಿಸಿ ಹೆಸರು ಗಳಿಸಿದ್ದಾರೆ. ಇವರ 'ರಾವಿ ನದಿ ದಂಡೆಯಲ್ಲಿ' ನಾಟಕವು ದಿಲ್ಲಿಯಲ್ಲಿ ರಂಗ ಗಂಗೋತ್ರಿ ಆಯೋಜಿಸಿದ ನಾಟಕ ಸ್ಪರ್ಧೆಯಲ್ಲಿ 'ಅತ್ಯುತ್ತಮ ಪ್ರಯೋಗಾತ್ಮಕ ನಾಟಕ'ವೆಂಬ ಪ್ರಶಸ್ತಿ ಗಳಿಸಿದೆಯಲ್ಲದೆ ಕರ್ನಾಟಕ ಸರಕಾರದ ಸಂಸ್ಕೃತಿ ಇಲಾಖೆಯು ತುಮಕೂರಿನಲ್ಲಿ 1998ರಲ್ಲಿ ಆಯೋಜಿಸಿದ ನಾಟಕ ಉತ್ಸವದಲ್ಲಿ ಭಾಗವಹಿಸಿದ ಮುಂಬಯಿಯ ಏಕೈಕ ತಂಡವೆಂಬ ಹೆಗ್ಗಳಿಕೆಯನ್ನು ತನ್ನದಾಗಿಸಿಕೊಂಡಿದೆ.

ಭರತ್‌ಕುಮಾರ್ ಪೊಲಿಪುರವರಿಗೆ 'ನೇಸರು'ವಿನ ಹಾರ್ದಿಕ ಅಭಿನಂದನೆಗಳು.

## ಮುಂಬಯಿ ಕನ್ನಡ ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳು

ಮುಂಬಯಿ ಕನ್ನಡ ಸಂಘವು ಶನಿವಾರ 25-02-2006ರಂದು ಪುರಂದರದಾಸರ ಆರಾಧನೆಯನ್ನು ಅವರ ಕೃತಿಗಳ ಗಾಯನ ಸ್ಪರ್ಧೆಯ ಮೂಲಕ ಆಚರಿಸಿತು. ಸ್ಪರ್ಧೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಾಳುಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಮರುದಿನ ರವಿವಾರ 26-02-2006ರಂದು ಜಿ.ವಿ. ರಂಗಸ್ವಾಮಿ ಮತ್ತು ಖಾಲ್ಸಾ ಕಾಲೇಜು ಕನ್ನಡ ಪ್ರೇಮಿ ಮಂಡಳಿ ದತ್ತಿಉಪನ್ಯಾಸ ಕಾರ್ಯಕ್ರಮದಲ್ಲಿ ಡಾ. ತೀ. ನಂ. ಶಂಕರನಾರಾಯಣ (ಪ್ರಾಧ್ಯಾಪಕರು ಕನ್ನಡ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ) ಅವರು 'ಕಾವ್ಯ ಸ್ವಾರಸ್ಯ' ಎಂಬ ವಿಷಯದಲ್ಲಿ ಪಂಪನ ಆದಿ ರಾಮಾಯಣದ ಉದಾಹರಣೆಯನ್ನು ಎತ್ತಿಕೊಂಡು ಉಪನ್ಯಾಸ ಮಾಡಿದರು. ಪ್ರಾ. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ (ನಿರ್ದೇಶಕರು, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ) ಅವರು ಕರ್ನಾಟಕ ಸಂಸ್ಕೃತಿಯ ಬಗ್ಗೆ ಮಾತನಾಡುತ್ತಾ ಕನ್ನಡ ಅನುಭವಿಗಳ ವಿಷಯ ಮಂಡಿಸಿದರು. ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿ (ನಿವೃತ್ತ ಪ್ರಾಧ್ಯಾಪಕರು, ಮೈಸೂರು) ತಮ್ಮ ಅಧ್ಯಕ್ಷ ಭಾಷಣದಲ್ಲಿ ಇವರಿಬ್ಬರ ವ್ಯಾಖ್ಯಾನವನ್ನು ಉತ್ತಮವಾಗಿ ಇನ್ನಷ್ಟು ವಿವರಣೆಗಳೊಂದಿಗೆ ದೃಢಪಡಿಸಿದರು. ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ತಾಳ್ತಜೆ ವಸಂತ ಕುಮಾರು ಪ್ರಸ್ತಾವನೆ ಗೈದರು.

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647 ● Fax : 2401 0574
Email : karunadu@bom5.vsnl.net.in
Printed at Aarati Art Printers, Fort, Mumbai-400 001. * 2266 3361 / 2266 5938